# ಮೀನುಗಾರಿಕೆ ಇಲಾಖೆ
## ವಾರ್ಷಿಕ ವರದಿ 2020-21

1. ಮೀನುಗಾರಿಕೆಯು ಪೌಷ್ಠಿಕ ಆಹಾರ, ವಿದೇಶಿ ವಿನಿಮಯ ಹಾಗೂ ಉದ್ಯೋಗಾವಕಾಶದ ಸೃಷ್ಠಿಯ ಮೂಲವಾಗಿರುವುದರಿಂದರಾಜ್ಯದ ಹಾಗೂ ದೇಶದಆರ್ಥಿಕ ಪ್ರಗತಿಯಲ್ಲಿ ಪ್ರಮುಖ ಸ್ಥಾನವನ್ನು ಹೊಂದಿದೆ.

2. ಕರ್ನಾಟಕರಾಜ್ಯವು 2.93 ಲಕ್ಷ ಹೆಕ್ಟೇರ್ ಜಲ ವಿಸ್ತೀರ್ಣವುಳ್ಳ ಕೆರೆ, ಕೊಳಗಳನ್ನು ಮತ್ತು 2.72 ಲಕ್ಷ ಹೆಕ್ಟೇರ್ ವಿಸ್ತೀರ್ಣವುಳ್ಳ ಜಲಾಶಯಗಳನ್ನೊಳಗೊಂಡು ಒಟ್ಟು 5.65 ಲಕ್ಷ ಹೆಕ್ಟೇರಿನಷ್ಟು ವಿಸ್ತೀರ್ಣವುಳ್ಳ ಒಳನಾಡು ಜಲ ಸಂಪನ್ಮೂಲವನ್ನು ಹೊಂದಿದೆ. ಇದರಜೊತೆಗೆ 8000 ಹೆಕ್ಟೇರಿನಷ್ಟು ಹಿನ್ನೀರು ಪ್ರದೇಶ, 320 ಕಿ.ಮೀ. ಉದ್ದದ ಕರಾವಳಿ ತೀರ ಪ್ರದೇಶ ಹಾಗೂ 27,000 ಚ. ಕಿ.ಮೀ. ವಿಸ್ತೀರ್ಣದ ವಿಶಾಲವಾದ ಭೂಖಂಡ ಪ್ರದೇಶವನ್ನು ಹೊಂದಿದ್ದು, ಮೀನುಗಾರಿಕೆಯಅಭಿವೃದ್ಧಿಗೆ ವಿಫುಲ ಅವಕಾಶ ಹೊಂದಿರುತ್ತದೆ.

3. 2020-21 ನೇ ಸಾಲಿನಲ್ಲಿಕಡಲ ಮೀನು ಉತ್ಪಾದನೆಯು 3.45 ಲಕ್ಷ ಮೆಟ್ರಿಕ್ ಟನ್ನಗಳಷ್ಟಾಗಿರುತ್ತದೆ. ಕಡಲ ಮೀನುಗಾರಿಕೆಯಕಾರ್ಯಾಚರಣೆಯಲ್ಲಿ 4,597 ಯಾಂತ್ರೀಕೃತ ದೋಣಿಗಳು, 10,100 ಮೋಟರೀಕೃತ ದೋಣಿಗಳು ಮತ್ತು 9,760 ನಾಡ ದೋಣಿಗಳಿವೆ. ಯಾಂತ್ರೀಕೃತ ಮೀನುಗಾರಿಕೆ ದೋಣಿಗಳು ರಾಜ್ಯದಒಟ್ಟುಕಡಲ ಮೀನು ಉತ್ಪಾದನೆಯಲ್ಲಿ ಶೇಕಡ 85%ಕ್ಕಿಂತಲೂ ಹೆಚ್ಚಿನ ಪ್ರಮಾಣದ ಮೀನನ್ನು ಹಿಡಿಯುತ್ತಿವೆ.

4. 2019-20 ನೇ ಸಾಲಿನಲ್ಲಿರೂ 1367.13 ಕೋಟಿ ($198.92) ಮೌಲ್ಯದ 95,841 ಮೆಟ್ರಿಕ್ ಟನ್ನಗಳಷ್ಟು ಕಡಲ ಉತ್ಪನ್ನಗಳನ್ನು ರಾಜ್ಯದಿಂದರಫ್ತು ಮಾಡಲಾಗಿದೆ.

5. "ಮೀನುಗಾರಿಕೆ ದೋಣಿಗಳಿಗೆ ಡೀಸೆಲ್- ಮಾರಾಟತೆರಿಗೆ ಮರುಪಾವತಿ" ಎಂಬ ಯೋಜನೆಯಲ್ಲಿ ಯಾಂತ್ರೀಕೃತ ದೋಣಿಗಳು ಮೀನುಗಾರಿಕೆಗೆ ಬಳಸಿದ ಡೀಸೆಲ್ ಮೇಲಿನ ಮಾರಾಟಕರಕ್ಕೆ ಸಮಾನವಾದ ಮೊತ್ತವನ್ನು ಸಹಾಯಧನವಾಗಿ ದೋಣಿ ಮಾಲೀಕರ ಬ್ಯಾಂಕು ಖಾತೆಗೆ ನೇರವಾಗಿ ವರ್ಗಾಯಿಸಲಾಗುತ್ತಿದೆ. 2020-21ನೇ ಸಾಲಿನಲ್ಲಿ ರೂ.13007.36 ಕೋಟಿಗಳ ಸಹಾಯಧನವನ್ನು 4512 ಮೀನುಗಾರಿಕೆ ದೋಣಿಗಳ ಮಾಲೀಕರಿಗೆ ನೀಡಲಾಗಿದೆ.

6. ಕರಾವಳಿಯಲ್ಲಿ ಪರ್ಮಿಟ್ ಪಡೆದ 4514 ಸಾಂಪ್ರದಾಯಿಕ ಮೀನುಗಾರಿಕೆ ದೋಣಿಗಳು ಕಾರ್ಯಾಚರಣೆಯಲ್ಲಿದ್ದು, ಮಾಸಿಕ 1355 ಕಿಲೋ ಲೀಟರ್ ಸೀಮೆ ಎಣ್ಣೆಯನ್ನು ಪಡಿತರದರದಲ್ಲಿ ನೀಡಲಾಗುತ್ತಿದೆ. 2020-21 ನೇ ಸಾಲಿನಲ್ಲಿ ಈ ದೋಣಿಗಳು ಬಳಸುವ 7247 KL ಸೀಮೆ ಎಣ್ಣೆಯನ್ನು ಪಡಿತರದರದಲ್ಲಿ ನೀಡಲು ರೂ.320.00 ಲಕ್ಷ ವೆಚ್ಚ ಮಾಡಲಾಗಿದೆ.

7. ಉಡುಪಿ ಜಿಲ್ಲೆಯ ಬೈಂದೂರ್ ತಾಲ್ಲೂಕಿನ ಮರವಾಂತೆಯಲ್ಲಿ ಮೀನುಗಾರರ ಬಳಕೆಗೆ ಲಭ್ಯವಾಗುವಂತೆ ಕೇಂದ್ರ ಸರ್ಕಾರದವು ಮೀನುಗಾರಿಕೆ ಬಂದರನ್ನು ರೂ.85.00 ಕೋಟಿ ಅಂದಾಜು ವೆಚ್ಚದಲ್ಲಿ ಹೊರ ಬಂದರಿನ ಎರಡನೇ ಹಂತದ ಕಾಮಗಾರಿಯ ನಿರ್ಮಾಣಕ್ಕೆ ಅನುಮೋದನೆ ನೀಡಿಲಾಗಿದೆ.

8. ಉಡುಪಿ ಜಿಲ್ಲೆಯ ಕೊಡೆರಿಯಲ್ಲಿ ಮೀನುಗಾರಿಕೆ ಬಂದರಿನ ಅಭಿವೃದ್ಧಿ ಕಾರ್ಯಗಳಿಗೆ ರಾಜ್ಯ ಸರ್ಕಾರವು ರೂ.2.00 ಕೋಟಿ ಅನುದಾನ ಬಿಡುಗಡೆ ಮಾಡಲಾಗಿದೆ.

9. "ಮತ್ಸ್ಯ ಕೃಷಿ ಆಶಾ ಕಿರಣ" ಯೋಜನೆಯಡಿ ಆಯ್ದ ಧೀರ್ಘಾವಧಿ ನೀರಿರುವ ಕೆರೆಗಳಲ್ಲಿ ಮೀನು ಉತ್ಪಾದನೆಯನ್ನು ಹೆಚ್ಚಿಸಿ ಹಾಗೂ ಮೀನು ಕೃಷಿಗೆ ಉತ್ತೇಜನ ನೀಡಲು, ಪ್ರತಿ ಹೆಕ್ಟೇರ್ 4,000 ಬಲಿತ ಮೀನು ಮರಿಗಳನ್ನು ಹಾಗೂ 2 ಟನ್ ಕೃತಕ ಆಹಾರವನ್ನು ಖರೀದಿಸಲು ಘಟಕ ವೆಚ್ಚದ ಶೇ.50 ರಷ್ಟು ಗರಿಷ್ಠ ರೂ.27,000ಗಳ ಸಹಾಯಧನ ನೀಡಲಾಗುವುದು.

10. ರಾಜ್ಯದಲ್ಲಿ ಲಭ್ಯವಿರುವ ಒಳನಾಡು ಹಾಗೂ ಹಿನ್ನೀರು ಜಲಸಂಪನ್ಮೂಲಗಳಲ್ಲಿ ಸೀಗಡಿ ಮತ್ತು ಮೀನುಕೃಷಿಗೆ ಪ್ರೋತ್ಸಾಹ ನೀಡಲು ಒಂದು ಹೊಸ ಯೋಜನೆಯಲ್ಲಿ "ಉಪ್ಪು ನೀರಿನ ಸೀಗಡಿ ಮೀನು ಕೃಷಿ ಮಾಡಲು 50 ರಷ್ಟು ಸಬ್ಸಿಡಿ ರೂ.50.000 ಯುನಿಟ್ ವೆಚ್ಚದಲ್ಲಿ ಪ್ರತಿ ಹೆಕ್ಟೇರಿಗೆ ರೂ.1.00 ಲಕ್ಷ ಸಹಾಯಧನ ನೀಡಲಾಗುತ್ತಿದೆ.

11. ರಾಜ್ಯದ ಒಳನಾಡು ಜಲ ಸಂಪನ್ಮೂಲಗಳಲ್ಲಿ ಪ್ರತಿ ಹೆಕ್ಟೇರ್ ಉಪಯುಕ್ತತಾ ಜಲವಿಸ್ತೀರ್ಣಕ್ಕೆ 2000 ಬಲಿತ ಬಿತ್ತನೆ ಮೀನುಮರಿಗಳನ್ನು ಮೀನುಗಾರರ ಸಹಕಾರ ಸಂಘಗಳ ಮುಖಾಂತರ ಉಚಿತವಾಗಿ ಬಿತ್ತನೆ ಮಾಡಿ ಒಳನಾಡು ಮೀನು ಉತ್ಪಾದನೆಯನ್ನು ಹೆಚ್ಚಿಸಲು "ಒಳನಾಡು ಮೀನು ಕೃಷಿಗೆ ಪ್ರೋತ್ಸಾಹ" ಯೋಜನೆಗೆ ಮಂಜೂರಾತಿ ಪಡೆಯಲಾಗಿದೆ.

12. ಮೀನುಗಾರಿಕೆ ಚಟುವಟಿಕೆಗಳನ್ನು ಕೈಗೊಳ್ಳಲು ಮಹಿಳಾ ಮೀನುಗಾರರಿಗೆ ರೂ.50,000 ಗಳವರೆಗೆ ಶೇ.2ರ ಬಡ್ಡಿದರದಲ್ಲಿ ವಾಣಿಜ್ಯ/ಗ್ರಾಮೀಣ ಪ್ರಾದೇಶಿಕ ಬ್ಯಾಂಕ್ಗಳಿಂದ ನೀಡುತ್ತಿರುವ ಸಾಲವನ್ನು 2019–20ನೇ ಸಾಲಿನಿಂದ ಶೂನ್ಯ ಬಡ್ಡಿದರದಲ್ಲಿ ನೀಡಲು ಸರ್ಕಾರದ ಮಂಜೂರಾತಿ ನೀಡಲಾಗಿದೆ.

13. 2020–21ನೇ ಸಾಲಿನ ಪ್ರಧಾನ ಮಂತ್ರಿ ಮತ್ಸ್ಯ ಸಂಪದಯೋಜನೆಯಡಿ ರಾಜ್ಯ ಸರ್ಕಾರವು ರೂ.137.19 ಕೋಟಿ ಬಿಡುಗಡೆ ಮಾಡಲಾಗಿದೆ. ಇದರಲ್ಲಿ ಕೇಂದ್ರಕ್ಕೆ ರೂ.42.04 ಕೋಟಿ, ರಾಜ್ಯಕ್ಕೆ ರೂ.29.22 ಕೋಟಿ ಮತ್ತು ಫಲಾನುಭವಿಗಳಿಗೆ ರೂ.65.93 ಕೋಟಿ ವೆಚ್ಚದಲ್ಲಿ ಹಾಗೂ 31 ಘಟಕಗಳನ್ನು ಅನುಷ್ಠಾನಗೊಳಿಸಲು ರೂ.47.0085 ಕೋಟಿ ಬಿಡುಗಡೆಮಾಡಿದೆ. (ರಾಜ್ಯ ಮತ್ತು ಕೇಂದ್ರ ಸರ್ಕಾರ ಸೇರಿದಂತೆ )

14. ಸಂಕಷ್ಟ ಪರಿಹಾರ ನಿಧಿ ಯೋಜನೆಯಡಿ ಮೀನುಗಾರರಿಗೆ 84 ಪ್ರಕರಣಗಳಲ್ಲಿ ರೂ.422.64 ಲಕ್ಷ ಪರಿಹಾರ ನೀಡಲಾಗಿದೆ.

15. ಗಿರಿಜನ ಉಪಯೋಜನೆಯಡಿ ಪರಿಶಿಷ್ಠ ಪಂಗಡಕ್ಕೆ ಸೇರಿದ 08 ಫಲಾನುಭವಿಗಳಿಗೆ ರೂ.39.19 ಲಕ್ಷ ವೆಚ್ಚದಲ್ಲಿ ಸಂಚಾರಿ /ರೀಟೇಲ್ ಮೀನು ಕ್ಯಾಂಟೀನ್/ ತಾಜಾ ಮೀನು ಮಾರಾಟ ವಾಹನಗಳನ್ನು ಖರೀದಿಸಲು ಸಹಾಯಧನ ನೀಡಲಾಗಿದೆ.

## 1.21 ಮೀನುಗಾರಿಕೆಇಲಾಖೆಯ ಆಡಳಿತ ರೂಪರೇಷೆ

↓

ಮಾನ್ಯ ಮೀನುಗಾರಿಕೆ ಸಚಿವರು

↓

ಅಪರ ಮುಖ್ಯಕಾರ್ಯದರ್ಶಿ / ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿಯವರು, ಪಶುಸಂಗೋಪನೆ ಮತ್ತು ಮೀನುಗಾರಿಕೆ

↓

ಮೀನುಗಾರಿಕೆ ನಿರ್ದೇಶಕರು

**ಮೀನುಗಾರಿಕೆ ನಿರ್ದೇಶನಾಲಯ:**
ಮೀನುಗಾರಿಕೆ ಜಂಟಿ ನಿರ್ದೇಶಕರು– 2
ಮೀನುಗಾರಿಕೆ ಹಿರಿಯ ಉಪನಿರ್ದೇಶಕರು 1
ಮೀನುಗಾರಿಕೆ ಉಪನಿರ್ದೇಶಕರು (ಆಡಳಿತ) –1
ಮೀ.ಹಿರಿಯ ಸಹಾಯಕ ನಿರ್ದೇಶಕರು – 5
ಮೀ.ಸಹಾಯಕ ನಿರ್ದೇಶಕರು – 7
ಮೀನು ಸಂರಕ್ಷಣಾಧಿಕಾರಿ– 1

→ ಮೀನುಗಾರಿಕೆ ಜಂಟಿ ನಿರ್ದೇಶಕರು (ಬಂದರು), ಮಲ್ಪೆ.
ಮೀ.ಹಿರಿಯ ಸಹಾಯಕ ನಿರ್ದೇಶಕರು –5
ಮೀ.ಸಹಾಯಕ ನಿರ್ದೇಶಕರು 7

→ ಮೀನುಗಾರಿಕೆ ಜಂಟಿ ನಿರ್ದೇಶಕರು, ನಿಜಶರಣ ಶ್ರೀ.ಅಂಬಿಗರ ಚೌಡಯ್ಯ. ಬಾಗಲಕೋಟೆ
ಮೀನುಗಾರಿಜಕೆ ಸಹಾಯಕ ನಿರ್ದೇಶಕರು (ಶ್ರೇ–1)–5
ಮೀನುಗಾರಿಜಕೆ ಸಹಾಯಕ ನಿರ್ದೇಶಕರು (ಶ್ರೇ–2)–6

→ ವಲಯ ಮೀನುಗಾರಿಕೆಉಪನಿರ್ದೇಶಕರು–8
ಮೀನುಗಾರಿಕೆ ಸಹಾಯಕ ನಿರ್ದೇಶಕರು (ಶ್ರೇ–2)–4

↓

**ಮೀನುಮರಿಉತ್ಪಾದನಾ ಮತ್ತು ಪಾಲನಾ ಕೇಂದ್ರಗಳು**
ಮೀ. ಸಹಾಯಕ ನಿರ್ದೇಶಕರು (ಶ್ರೇ–1)–5
ಮೀ.ಸಹಾಯಕ ನಿರ್ದೇಶಕರು (ಶ್ರೇ–2)–22

**ಜಿಲ್ಲಾ ಮಟ್ಟದ ಅಧಿಕಾರಿಗಳು**
ಮೀ. ಹಿರಿಯ ಸಹಾಯಕ ನಿರ್ದೇಶಕರು– 24
ಮೀ. ಸಹಾಯಕ ನಿರ್ದೇಶಕರು (ಶ್ರೇ–1) – 6
ಮೀ.ಸಹಾಯಕ ನಿರ್ದೇಶಕರು (ಶ್ರೇ–2)–5

**ತರಬೇತಿ ಕೇಂದ್ರಗಳು**
ಮೀ. ಸಹಾಯಕ ನಿರ್ದೇಶಕರು (ಶ್ರೇ–1)– 4
ಮೀ.ಸಹಾಯಕ ನಿರ್ದೇಶಕರು (ಶ್ರೇ–2)–1

**ತಾಲ್ಲೂಕು ಮಟ್ಟದ ಅಧಿಕಾರಿಗಳು**
ಮೀ. ಸಹಾಯಕ ನಿರ್ದೇಶಕರು(ಶ್ರೇ– 2)–134

ಮೀನುಗಾರಿಕೆ ಇಲಾಖೆಯು ಮೀನುಗಾರಿಕೆ ಸಚಿವರ ಅಧಿಕಾರ ವ್ಯಾಪ್ತಿಯಲ್ಲಿರುತ್ತದೆ. ಸರ್ಕಾರದ ಹಂತದಲ್ಲಿ ಪ್ರಧಾನ ಕಾರ್ಯದರ್ಶಿಗಳು, ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ ರವರು ಮುಖ್ಯಸ್ಥರಾಗಿರುತ್ತಾರೆ. ಮೀನುಗಾರಿಕೆ ಇಲಾಖೆಯ ಆಡಳಿತ ಹಾಗೂ ಅಭಿವೃದ್ಧಿ ಕಾರ್ಯಕ್ರಮಗಳು ಮೀನುಗಾರಿಕೆ ನಿರ್ದೇಶಕರ ನೇತೃತ್ವದಲ್ಲಿ ನಡೆಯುತ್ತಿವೆ. ನಿರ್ದೇಶಕರ ಸಹಾಯಕ್ಕಾಗಿ 06 ಜಂಟಿ ನಿರ್ದೇಶಕರು, 12 ಉಪ ನಿರ್ದೇಶಕರು (ವಲಯ ಮಟ್ಟದ ಅಧಿಕಾರಿಗಳು), ಹಾಗೂ 26 ಹಿರಿಯ ಸಹಾಯಕ ನಿರ್ದೇಶಕರುಗಳು (ಜಿಲ್ಲಾ ಮಟ್ಟದ ಅಧಿಕಾರಿಗಳು) ಕಾರ್ಯನಿರ್ವಹಿಸುತ್ತಿದ್ದಾರೆ. 35 ಮೀನುಗಾರಿಕೆ ಸಹಾಯಕ ನಿರ್ದೇಶಕರು (ಶ್ರೇಣಿ–1) (ಜಿಲ್ಲಾ ಮಟ್ಟದ ಅಧಿಕಾರಿಗಳು) ಹಾಗೂ 188 ತಾಲ್ಲೂಕು ಮಟ್ಟದ ಅಧಿಕಾರಿಗಳು ಕಾರ್ಯನಿರ್ವಹಿಸುತ್ತಿದ್ದಾರೆ. ಇಲಾಖೆಯಲ್ಲಿ ಒಟ್ಟು 1419 ವಿವಿಧ ವೃಂದದ ಹುದ್ದೆಗಳು ಮಂಜೂರಾಗಿದ್ದು, 680 ಅಧಿಕಾರಿ ಮತ್ತು ಸಿಬ್ಬಂದಿ ಹುದ್ದೆಗಳು ಭರ್ತಿಯಾಗಿದ್ದು 739 ಹುದ್ದೆಗಳು ಖಾಲಿ ಇವೆ.

**2. 2020–21ರ ವಾರ್ಷಿಕಯೋಜನೆ:**

2020–21 ನೇ ಸಾಲಿನಲ್ಲಿ ಒಟ್ಟು ರೂ.29406.65 ಲಕ್ಷಗಳ ಅನುದಾನವನ್ನು ನೀಡಲಾಗಿತ್ತು. ಆದರೆ ಹಣಕಾಸಿನ ತೊಂದರೆಯಿಂದಾಗಿ ರೂ.24306.65ಲಕ್ಷಗಳನ್ನು ನೀಡಿರುತ್ತಾರೆ ಹಾಗೂ 2020–21ನೇ ಸಾಲಿನ ವರ್ಷದಲ್ಲಿ ವಿವಿದ ಯೋ ಯೋಜನೆಗಳಿಗೆ ಅಗತ್ಯತೆಗೆ ಅನುಗುಣವಾಗಿ ಹೆಚ್ಚುವರಿ ಅನುದಾನ ಸೇರಿ ಮೀನುಗಾರಿಕೆ ಇಲಾಖೆಗೆ ಒಟ್ಟು ರೂ.32184.28 ಲಕ್ಷಗಳ ಅನುದಾನ ಒದಗಿಸಲಾಗಿರುತ್ತದೆ. ವಿವರಗಳನ್ನು ಕೆಳಗಿನಂತೆ ನೀಡಲಾಗಿದೆ.

**(ರೂ.ಲಕ್ಷಗಳಲ್ಲಿ)**

| ವಿವರ | BE | RE | RE2 | | |
|---|---|---|---|---|---|
| **ರಾಜ್ಯವಲಯ ಯೋಜನೆಗಳು** | | **ರಾಜ್ಯದ ಪಾಲು** | **ರಾಜ್ಯ** | **ಕೇಂದ್ರ** | **ಒಟ್ಟು** |
| ಅ) 2405–ಮೀನುಗಾರಿಕೆ | 20208.00 | 15908.00 | 23101.99 | 2820.51 | 25922.50 |
| ಆ) 4405–ಮೀನುಗಾರಿಕೆ ಮೇಲಣ ಬಂಡವಾಳ ವೆಚ್ಚ | 4992.00 | 4192.00 | 3998.80 | 1073.20 | 5072.00 |
| **ಒಟ್ಟುರಾಜ್ಯ ವಲಯ** | **25200.00** | **20100.00** | **27100.79** | **3893.71** | **30994.50** |
| **ಜಿಲ್ಲಾ ಪಂಚಾಯತ್ ಯೋಜನೆಗಳು** | | | | | |
| ಅ) 2405–ಮೀನುಗಾರಿಕೆ | 4206.65 | 4207.65 | 4207.65 | 0.00 | 4207.65 |
| **ಒಟ್ಟು** | **29406.65** | **24306.65** | **30528.10** | **4674.05** | **35202.15** |

**ಹೆಚ್ಚುವರಿ ಅನುದಾನ ಪಡೆದ ಯೋಜನೆಗಳ ವಿವರಗಳು ಕೆಳಗಿನಂತೆ ನೀಡಲಾಗಿದೆ.**

| **ಕ್ರ.ಸಂ** | **ಯೋಜನೆ** | **ಹೆಚ್ಚುವರಿಅನುದಾನ (ರೂ.ಲಕ್ಷಗಳಲ್ಲಿ)** |
|---|---|---|
| 1. | ಕೇಂದ್ರ ಪುರಸ್ಕೃತ ಯೋಜನೆ ನೀಲಿ ಕ್ರಾಂತಿ– ಮೀನುಗಾರಿಕೆಯ ಸಮಗ್ರ ಅಭಿವೃದ್ಧಿ ಮತ್ತು ನಿರ್ವಹಣೆ–2405–00–101–0–58 | 3600.85 |
| 2. | ಕೇಂದ್ರ ಪುರಸ್ಕೃತ ಯೋಜನೆ ಉಳಿತಾಯ ಮತ್ತು ಪರಿಹಾರ ಯೋಜನೆ–2405–00–120–0–07–100 | 1395.78 |
| 3. | ಕರಾವಳಿ ಕೂಡು ರಸ್ತೆಗಳ ನಿರ್ವಹಣೆ–2405–00–337–0–01 | 2000.00 |

| | | |
|---|---|---|
| 4. | ಈಲ್ಲಾ ವಲಯ ಯೋಜನೆ–2405–00–196–1–01 | 1.00 |
| 5. | ಮೀನುಗಾರಿಕೆ ಜೆಟ್ಟಿ ಮತ್ತು ಮೀನು ಇಳಿದಾಣಗಳ ನಿರ್ಮಾಣ–4405–00–104–0–02 | 880.00 |
| 6. | ನಿರ್ದೇಶನ ಮತ್ತು ಆಡಳಿತ–2405–00–001–0–01 | 17.87 |
| 7. | ಮೀನುಗಾರಿಕೆ ದೋಣಿಗಳ ಬಳಸುವ ಡೀಸೆಲ್ ಮೇಲಿನ ಮಾರಾಟ ತೆರಿಗೆಯನ್ನು ಮರುಪಾವತಿ ಮಾಡುವದು–2405–00–103–0–23 | 3000.00 |
| | **ಒಟ್ಟು** | **10895.50** |

ಇದಲ್ಲದೆ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ ರೂ.1700.00 ಲಕ್ಷಗಳ ಅನುದಾನ ನೀಡಲಾಗಿದೆ.

**2020–21 ನೇ ಸಾಲಿನ ಆರ್ಥಿಕ ಪ್ರಗತಿಯ ಸಂಕ್ಷಿಪ್ತ ವಿವರಗಳನ್ನು ಈ ಕೆಳಗಿನಂತೆ ನೀಡಲಾಗಿದೆ.**

**ಆರ್ಥಿಕ ಪ್ರಗತಿ:** (ರೂ.ಲಕ್ಷಗಳಲ್ಲಿ)

| **ವಿವರ** | **ಅನುದಾನ** | **ಬಿಡುಗಡೆ** | | | **ವೆಚ್ಚ** |
|---|---|---|---|---|---|
| **ರಾಜ್ಯ ವಲಯ ಯೋಜನೆಗಳು** | | **ರಾಜ್ಯದ ಪಾಲು** | **ಕೇಂದ್ರದ ಪಾಲು** | **ಒಟ್ಟು** | |
| ಅ) 2405–ಮೀನುಗಾರಿಕೆ | | | | | |
| ಆ) 4405–ಮೀನುಗಾರಿಕೆ ಮೇಲಣ ಬಂಡವಾಳ ವೆಚ್ಚ | 25922.50 | 23101.99 | 2820.51 | 25922.20 | 25404.33 |
| **ಒಟ್ಟುರಾಜ್ಯ ವಲಯ** | 5072.00 | 3997.80 | 1073.20 | 5071.00 | 5070.16 |
| **ಜಿಲ್ಲಾ ಪಂಚಾಯತ್ ಯೋಜನೆಗಳು** | **30994.50** | **27099.78** | **3893.71** | **30993.49** | **30474.49** |
| **ವಿವರ** | | | | | |
| ಅ) 2405–ಮೀನುಗಾರಿಕೆ | 4207.65 | 4074.85 | 0.00 | 4074.85 | 3581.51 |
| **ಒಟ್ಟು** | **356202.15** | **31174.63** | **3893.71** | **35068.34** | **34056.00** |

**ಭೌತಿಕ ಪ್ರಗತಿ:**

| **ವಿವರ** | **ಪರಿಮಾಣ** | **ಗುರಿ** | **ಸಾಧನೆ** |
|---|---|---|---|
| **ಮೀನು ಉತ್ಪಾದನೆ** | | | |
| **ಒಳನಾಡು** | **ಲಕ್ಷ ಮೆ.ಟನ್** | 2.00 | 2.51 |
| **ಕರಾವಳಿ** | **ಲಕ್ಷ ಮೆ.ಟನ್** | 4.10 | 3.45 |
| **ಒಟ್ಟು** | **ಲಕ್ಷ ಮೆ.ಟನ್** | **6.10** | **5.96** |
| **ಮೀನುಮರಿ ಉತ್ಪಾದನೆ** | | | |
| **ಫ್ರೈ** | **ಮಿಲಿಯನ್ ಗಳಲ್ಲಿ** | 725.00 | 754.57 |
| **ಫಿಂಗರ್‌ಲಿಂಗ್ಸ್** | **ಮಿಲಿಯನ್ ಗಳಲ್ಲಿ** | 362.00 | 377.28 |

**3. ಸಮುದ್ರ ಮೀನುಗಾರಿಕೆ**

**3.1 ಮೀನುಗಾರಿಕೆ ದೋಣಿಗಳಿಗೆ ಡೀಸೆಲ್–ಮಾರಾಟ ತೆರಿಗೆ ಮರುಪಾವತಿ (2405–00–103–0–23)**

"ಮೀನುಗಾರಿಕೆ ದೋಣಿಗಳಿಗೆ ಡೀಸೆಲ್– ಮಾರಾಟ ತೆರಿಗೆ ಮರುಪಾವತಿ" ಯೋಜನೆಯಡಿ ಯಾಂತ್ರೀಕೃತ ಮೀನುಗಾರಿಕೆ ದೋಣಿಗಳು ಬಳಸುವ ರಾಜ್ಯ ಮಾರಾಟಕ್ಕೆ ಸಮನಾದ ಮೊತ್ತವನ್ನು ದೋಣಿಗಳ ಮಾಲೀಕರ ಬ್ಯಾಂಕ್ ಖಾತೆಗೆ ಸಹಾಯಧನವಾಗಿ ನೇರವಾಗಿ ವರ್ಗಾಯಿಸಿ ಮರುಪಾವತಿ ಮಾಡಲಾಗುತ್ತದೆ. ಈ ಉದ್ದೇಶಕ್ಕಾಗಿ ರೂ.13500.00 ಲಕ್ಷ ಅನುದಾನ ಒದಗಿಸಲಾಗಿರುತ್ತದೆ. ನಂತರ ಕಡಿಮೆ ಮಾಡಿ ರೂ.10000.00 ಲಕ್ಷಗಳ ಅನುದಾನವನ್ನು ಒದಗಿಸಿರುತ್ತಾರೆ. ಹಾಗೂ ಹೆಚ್ಚುವಾರಿ ಅನುದಾನ ರೂ.3000.00 ಲಕ್ಷಗಳುನ್ನು ಬಿಡುಗಾಡಿ ಮಾಡಿರುತ್ತಾರೆ. ಇದರಲ್ಲಿ 3141 ಯಾಂತ್ರೀಕೃತ ಮೀನುಗಾರಿಕೆ ದೋಣಿಗಳಿಗೆ 82,995 ಕಿಲೋ ಲೀಟರ್ ಡೀಸಲ್ ಪೂರೈಸಲು ರೂ.13007.57 ಲಕ್ಷ ವೆಚ್ಚ ಮಾಡಲಾಗಿದೆ.

### 3.2 ಸಾಂಪ್ರದಾಯಿಕ ದೋಣಿಗಳಿಗೆ ಸೀಮೆ ಎಣ್ಣೆ ಸರಬರಾಜು: (2405–00–103–0–17)

ಕರ್ನಾಟಕದ ಕರಾವಳಿಯಲ್ಲಿ ಬಹು ಸಂಖ್ಯೆಯ ನಾಡ ದೋಣಿಗಳು ಮೀನುಗಾರಿಕೆಯಲ್ಲಿ ತೊಡಗಿದ್ದು, ಹಂತ ಹಂತವಾಗಿ ಈ ನಾಡ ದೋಣಿಗಳು ಔಟ್ ಬೋರ್ಡ್ ಇಂಜಿನ್‌ಗಳನ್ನು ಅಳವಡಿಸಿಕೊಂಡು ಸಮುದ್ರತೀರದಿಂದ ದೂರದವರೆಗೆ ಕ್ಷಿಪ್ರಕಾಲದಲ್ಲಿ ಮೀನುಗಾರಿಕೆಗೆ ತೆರಳಿ ಲಾಭದಾಯಕ ಮೀನುಗಾರಿಕೆ ಮಾಡಲು ಸಫಲವಾಗಿದೆ. ಈ ಮೋಟರೀಕೃತ ನಾಡ ದೋಣಿಗಳಿಗೆ ಬಹು ವರ್ಷಗಳಿಂದ ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳ ಇಲಾಖೆ ವತಿಯಿಂದ ಪಡಿತರದರದಲ್ಲಿ ಪ್ರತಿ ಮಾಹೆಯಾನ ತಲಾ 300 ಲೀಟರ್ ಸೀಮೆ ಎಣ್ಣೆಯನ್ನು ಪ್ರತಿ ಬೋಟಿಗೆ ಪೂರೈಸಲಾಗುತ್ತಿತ್ತು. ಆದರೆ 2018–19ನೇ ಸಾಲಿನಿಂದ ಮೀನುಗಾರಿಕೆ ಇಲಾಖೆಯಡಿ ಈ ಯೋಜನೆಗೆ ಅನುದಾನ ಒದಗಿಸಲಾಗುತ್ತಿದೆ. ಈ ಸಾಂಪ್ರದಾಯಿಕ ದೋಣಿಗಳಿಗೆ ಪಡಿತರದರದಲ್ಲಿ ಪ್ರತಿ ಮಾಹೆ 300 ಲೀಟರ್ ಸೀಮೆ ಏಣ್ಣೆಯನ್ನು ಪ್ರತಿ ಬೋಟಿಗೆ ಸರಬರಾಜು ಮಾಡಲು ಅವಕಾಶ ಕಲ್ಪಿಸಲಾಗಿದೆ. 4514 ಪರವಾನಗಿ ಹೊಂದಿರುವ ಸಾಂಪ್ರದಾಯಿಕ ಮೀನುಗಾರಿಕೆ ದೋಣಿಗಳಿಗೆ ಪ್ರತಿ ಮಾಹೆ 1355 ಕಿಲೋ ಲೀಟರ್ ಸೀಮೆ ಎಣ್ಣೆಯನ್ನು ಪಡಿತರದರದಲ್ಲಿ ವಿತರಿಸಲಾಗಿದೆ.

**ರೂ. 314.00 ಲಕ್ಷ ಮೊತ್ತವನ್ನು ಈ ಕೆಳಗಿನ ಯೋಜನೆಗಳಿಗೆ ಪುನರ್ ವಿನೀಯೋಗ ಮಾಡಲಾಗಿದೆ.**

| ಕ್ರಸಂ | ಯೋಜನೆ | ಮೊತ್ತ |
|---|---|---|
| 1. | ಉತ್ತರ ಕರ್ನಾಟಕ ಒಳನಾಡಿನ ಮೀನುಗಾರಿಕೆ ಅಭಿವೃದ್ಧಿ ಕೇಂದ್ರ ಸ್ಥಾಪನೆ (2405–00–101–0–67) | 25.00 |
| 2. | ಒಳನಾಡಿನ ಮೀನುಗಾರಿಕೆ ಅಭಿವೃದ್ಧಿಗೆ ನೆರವು (ರಾಜ್ಯ ವಲಯ) (2405–00–101–0–03) | 50.00 |
| 3. | ನಿರ್ದೇಶನ ಮತ್ತು ಆಡಳಿತ (2405–00–001–0–01– 200– ನಿರ್ವಹಣೆ ವೆಚ್ಚ): | 98.00 |
| 4. | ನಿರ್ದೇಶನ ಮತ್ತು ಆಡಳಿತ (2405–00–001–0–01– 071– ಕಟ್ಟಡ ವೆಚ್ಚಗಳು) | 8.00 |
| 5. | ನಿರ್ದೇಶನ ಮತ್ತು ಆಡಳಿತ (2405–00–001–0–01– 071– ಸಂಬಳ ವೆಚ್ಚಗಳು) | 25.00 |
| 6. | ನಿರ್ದೇಶನ ಮತ್ತು ಆಡಳಿತ (2405–00–001–0–01– 071– ವಾಹನ ವೆಚ್ಚಗಳು) | 25.00 |
| 7. | ಐಸ್ ಪ್ಲಾಂಟ್‌ಗಳು ಬಳಸುವ ವಿದ್ಯುತ್ ಮೇಲಿನ ಸಹಾಯಧನ–2405–00–110–0–03 | 75.00 |
| 8. | ಮೀನುಗಾರಿಕೆ ದೋಣಿಗಳು ಬಳಸುವ ಡೀಸೆಲ್ ಮೇಲಿನ ಮಾರಾಟ ತೆರಿಗೆಯನ್ನು ಮರುಪಾವತಿ ಮಾಡುವುದು (2405–00–103–0–23–422– ವೇಳಾಪಟ್ಟಿ ಜಾತಿ ಉಪ ಯೋಜನೆ) | 8.00 |
| | **ಒಟ್ಟು** | **314.00** |

ಸದರಿ ಯೋಜನೆಗೆ ಮೊತ್ತ ರೂ. 640.00 ಲಕ್ಷ ಗಳನ್ನು ಒದಗಿಸಲಾಗಿತ್ತು ಅದರಲ್ಲಿ ರೂ. 320.00 ಲಕ್ಷ ವೆಚ್ಚದಲ್ಲಿ 82,995 ಕಿ.ಲೀ ಸೀಮೆಎಣ್ಣೆಯನ್ನು 4514 ದೋಣಿಗಳಿಗೆ ವಿತರಿಸಲಾಗಿದೆ.

### 3.3 ಮೀನುಗಾರಿಕೆ ಬಂದರುಗಳು – ಕೇಂದ್ರ ಪುರಸ್ಕೃತಯೋಜನೆ (4405–00–103–6–01):

ಹೆಜಮಾಡಿಕೋಡಿಯಲ್ಲಿ ಮೀನುಗಾರಿಕೆ ಬಂದರು ನಿರ್ಮಾಣಕ್ಕೆ ಕೇಂದ್ರ ಸರ್ಕಾರದಿಂದ 2019–20ರಲ್ಲಿ ರೂ.138.60 ಕೋಟಿ ಅನುಮೋದನೆದೊರೆತಿದ್ದು ರೂ.13.86 ಕೋಟಿ ಮೊದಲ ಕಂತಿನ ಅನುದಾನ ಬಿಡುಗಡೆಯಾಗಿರುತ್ತದೆ. 2020–21ರ ಅವಧಿಯಲ್ಲಿ ರೂ.2500.00 ಲಕ್ಷ ಹಂಚಿಕೆ ಮಾಡಿ ಬಿಡುಗಾಡೆ ಮಾಡಿದ್ದು ಆದರಲ್ಲಿ ರೂ.2499.68 ಲಕ್ಷಗಳ ವೆಚ್ಚ ಮಾಡಲಾಗಿದೆ. ವಿವರಗಳನ್ನು ಕೆಳಗಿನಂತೆ ನೀಡಲಾಗಿದೆ.

**(ರೂ.ಲಕ್ಷಗಳಲ್ಲಿ)**

| ಕ್ರಸಂ | ಯೋಜನೆ | ಅನುಮೋದಿತ ವೆಚ್ಚ | ವೆಚ್ಚ | ಸಂಚಿತ ವೆಚ್ಚ |
|---|---|---|---|---|
| 1. | ಗಂಗೊಲ್ಲಿ ಮೀನುಗಾರಿಕೆ ಬಂದರಿನಲ್ಲಿ ಬ್ರೇಕ್‌ವಾಟರ್ ನಿರ್ಮಾಣ–2ನೇ ಹಂತ (75:25::C:S) | 10211.00 | 1213.43 | 10044.69 |
| 2. | ಹೆಜ್ಮಡಿಕೋಡಿ ಮೀನುಗಾರಿಕೆ ಬಂದರಿನ ನಿರ್ಮಾಣ (75:25::C:S) | 18084.00 | 212.91 | 262.23 |
| 3. | ಅಲೆವೆಕೋಡಿ ತೆಂಗಿನಗುಂಡಿಯಲ್ಲಿ ಬ್ರೇಕ್ ವಾಟರ್ ನಿರ್ಮಾಣ (50:50::C:S) | 8608.00 | 1073.34 | 1073.34 |
| | | 36903.00 | 2499.68 | 11380.26 |

### 3.4. ಮೀನುಗಾರಿಕೆ ಇಳಿದಾಣ ಮತ್ತು ತಂಗುದಾಣಗಳು (4405–00–104–0–02):

ರಾಜ್ಯ ಸರ್ಕಾರವು ಎರಡು ಹೊಸ ಯೋಜನೆಗಳಿಗೆ ಅನುಮೋದನೆ ನೀಡಿದೆ. ಉಡುಪಿ ಜಿಲ್ಲೆಯ ಬೈಂದೂರ್ ತಾಲ್ಲೂಕಿನ ಮಾರವಂತೆಯಲ್ಲಿ ರೂ.85.00ಕೋಟಿ ವೆಚ್ಚದಲ್ಲಿ ಬಾಹ್ಯ ಬಂದರಿನ ಎರಡನೇ ಹಂತದ ಕಾಮಗಾರಿ ನಿರ್ಮಾಣ ಮತ್ತು ಉಡುಪಿ ಜಿಲ್ಲೆಯ ಕೊಡೇರಿ ರೂ.2.00 ಕೋಟಿ ವೆಚ್ಚದಲ್ಲಿ ನಿರ್ಮಾಣ ಹಂತದಲ್ಲಿದೆ.

ಈ ಯೋಜನೆಯಡಿ ಬಜೆಟ್‌ನಲ್ಲಿ ರೂ.100.00 ಲಕ್ಷ ಹಂಚಿಕೆ ಮಾಡಲಾಗಿದೆ. ಆದರೆ ಹೆಚ್ಚುವರಿಯಾಗಿ ಬಜೆಟ್ ರೂ. 880.00 ಲಕ್ಷ ಪೂರಕ ಅಂದಾಜು ಮಾಡಲಾಗಿದೆ. 2020-21ರ ಚಾಲ್ತಿಯಲ್ಲಿರುವ ಗಂಗೊಲ್ಲಿ ಡಯಾಫ್ರಾಮ್ ಗೋಡೆ, ಕೊಡೆರಿಯಲ್ಲಿನ ನ್ಯಾವಿಗೇಷನಲ್ ಚಾನಲ್ ಜೊತೆಗೆ ನದಿ ತೀರದ ರಕ್ಷಣೆ ಕಾರ್ಯಗಳು, ಕೊಡೆರಿ ಮೀನುಗಾರಿಕೆ ಬಂದರಿನಲ್ಲಿ ಅಭಿವೃದ್ಧಿ ಮತ್ತು ಮೂಲಸೌಕರ್ಯ ಕಾರ್ಯಗಳಿಗಾಗಿ ರೂ. 980.00 ಲಕ್ಷ ಬಿಡುಗಡೆ ಮಾಡಲಾಗಿದೆ. ಹಾಗೂ 979.98 ವೆಚ್ಚವಾಗಿದೆ. ಈ ಯೋಜನೆಯಡಿ ನಡೆಯುತ್ತಿರುವ ಕಾಮಗಾರಿಗಳನ್ನು ಈ ಕೆಳಗಿನಂತೆ ನೀಡಲಾಗಿದೆ

| ಕ್ರ.ಸಂ | ಯೋಜನೆ | ಅನುಮೋದಿತ ವೆಚ್ಚ | ವೆಚ್ಚ | ಸಂಚಿತ ವೆಚ್ಚ |
|---|---|---|---|---|
| 1. | ಕೊಡೇರಿಯಲ್ಲಿ ಮೀನುಗಾರಿಕೆತಡೆಗೋಡೆ ನಿರ್ಮಾಣ (2ನೇ ಹಂತ) | 3300.00 | 96.43 | 1382.93 |
| 2. | ಗಂಗೊಳ್ಳಿ ಮೀನುಗಾರಿಕೆ ಬಂದರಿನ ಮರು ನಿರ್ಮಾಣಕಾಮಗಾರಿ (ಗಂಗೊಳ್ಳಿ ಡಯಾಫ್ರಂ ವಾಲ್‌ಕಾಮಗಾರಿ) | 1200.00 | 370.63 | 370.63 |
| 3. | ಕೊಡೆರಿ ಮೀನುಗಾರಿಕೆ ಬಂದರಿನಲ್ಲಿನ ನ್ಯಾವಿಗೇಷನ್ ಚಾನಲ್ ಉದ್ದಕ್ಕೂ ನದಿ ತೀರ ರಕ್ಷಣೆ ಕಾರ್ಯವನ್ನು ಒದಗಿಸುವುದು | 280.00 | 189.77 | 189.77 |
| 4. | ರಾಜ್ಯದ ಮೀನುಗಾರಿಕೆ ಬಂದರುಗಳ ವಿವಿಧ ಕಾಮಗಾರಿಗಳು (ಉಡುಪಿ ವಿಭಾಗದ) | 912.85 | 126.05 | 174.80 |
| 5. | ರಾಜ್ಯದ ಮೀನುಗಾರಿಕೆ ಬಂದರುಗಳ ವಿವಿಧ ಕಾಮಗಾರಿಗಳು (ಕಾರವಾರ ವಿಭಾಗದ) | 316.48 | 132.20 | 172.92 |
| 6. | ಇತರೆ ವೆಚ್ಚಗಳು(CRZ) | 0 | 64.90 | 64.90 |
| | | 6009.33 | 979.98 | 2355.95 |

### 3.5 ನಬಾರ್ಡ್ ನೆರವಿನ ಗ್ರಾಮೀಣ ಮೂಲಭೂತ ಸೌಕರ್ಯಗಳ ಅಭಿವೃದ್ಧಿ ನಿಧಿ ಯೋಜನೆ (4405-00-800-2-03):

ಆಯವ್ಯಯದಲ್ಲಿ ರೂ.2391.00 ಲಕ್ಷ ಒದಗಿಸಲಾಗಿದ್ದು ಪರಿಷ್ಕೃತ ಆಯವ್ಯಯದಲ್ಲಿ ರೂ.1590.50 ಲಕ್ಷ ಒದಗಿಸಲಾಗಿತು. ನಬಾರ್ಡ್ ನೆರವಿನ ಗ್ರಾಮೀಣ ಮೂಲಭೂತ ಸೌಕರ್ಯಗಳ ಅಭಿವೃದ್ಧಿ ನಿಧಿ 23 ಮತ್ತು 24ರ ಅಡಿಯಲ್ಲಿ 09 ಕಾಮಗಾರಿಗಳಿಗೆ ರೂ.1590.50 ವೆಚ್ಚದಲ್ಲಿ ಅನುಮೋದನೆ ನೀಡಲಾಗಿದೆ. ಈ ಕಾರ್ಯಗಳ ವಿವರ ಕೆಳಕಂಡಂತಿದೆ.

| ಕ್ರ.ಸಂ | Tranche | ಯೋಜನೆಗಳ ವಿವರ | ಮೊತ್ತ |
|---|---|---|---|
| 1. | 23 | ಉಡುಪಿ ತಾಲ್ಲೂಕು ಮತ್ತುಜಿಲ್ಲೆಯಕೋಡಿ ಬೆಂಗ್ರೆನಲ್ಲಿ ಮೀನುಗಾರಿಕೆಜೆಟ್ಟಿಯ ವಿಸ್ತರಣೆ | 17.15 |
| 2. | 24 | ಎಚ್ ಡಿ ಕೋಟೆಯಲ್ಲಿ ನುಗು ಫಿಶ್ ಫಾರ್ಮ್‌ನಲ್ಲಿ 15 ಮಣ್ಣಿನ ಕೊಳಗಳನ್ನು ಕಲ್ಲಿನ ಕೊಳಗಳಾಗಿ ಪರಿವರ್ತಿಸುವುದು | 50.00 |
| 3. | 24 | ಎಚ್ ಡಿ ಕೋಟೆಯಲ್ಲಿರುವ ಕಬಿನಿ ಫಿಶ್ ಫಾರ್ಮ್‌ನಲ್ಲಿ 10 ಮಣ್ಣಿನ ಕೊಳಗಳನ್ನು ಕಲ್ಲಿನ ಕೊಳಗಳಾಗಿ ಪರಿವರ್ತಿಸುವುದು | 50.00 |
| 4. | 24 | ಸೋಮವರ್‌ಪೇಟೆತಾಲ್ಲೂಕಿನ ಹರಂಗಿ ಮೀನು ತೋಟದಲ್ಲಿ ಅಸ್ತಿತ್ವದಲ್ಲಿರುವ ಮೀನು ಕೊಳಗಳ ಪುನಃಸ್ಥಾಪನೆ | 50.00 |
| 5. | 24 | ತರಿಕೇರೆತಾಲ್ಲೂಕಿನ ಮೆನಸಿನಹಳ್ಳಿ ಮೀನುಸಾಗಣಿಕೆಯಲ್ಲಿRCC Lining to Earthern ponds Nos 1 to 12 ನಿರ್ಮಾಣ | 100.00 |
| 6. | 24 | ಭದ್ರವತಿತಾಲ್ಲೂಕಿನ ಬಿ ಆರ್‌ಯೋಜನೆಯಲ್ಲಿ ಮೀನು ಸಾಕಾಣಿಕೆಕೇಂದ್ರದಅಭಿವೃದ್ಧಿ ಕಾರ್ಯಗಳು | 50.00 |
| 7. | 24 | ಹಂಗಾರ್‌ಕಟ್ಟೆಉಡುಪಿ ತಾಲ್ಲೂಕಿನಲ್ಲಿAuction Hall ನಿರ್ಮಾಣ | 8.67 |
| 8. | 24 | ವಿಜಯಪುರ ಮುದ್ದೆಬಿಹಾಲ್ ತಾಲ್ಲೂಕಿನ ನಾರಾಯಣಪುರ ಮೀನು ಸಾಗಣಿಕೆಯಲ್ಲಿ RCC Lining to Breeding ponds , RCC Drainage ನಿರ್ಮಾಣ | 300.00 |
| 9. | 24 | ಶಿವಪುರ ಮೀನು ಸಾಕಣೆ ಕೇಂದ್ರದಲ್ಲಿ ಮೀನು ಕೊಳಗಳಿಗೆ RCC Lining to Breeding ponds, fencing, main | 260.67 |

| | | | |
|---|---|---|---|
| | | water supply, hatchery construction, road and RCC drainage ನಿರ್ಮಾಣ. | |
| 10. | | ಕಾರ್ಯಪಾಲಕ ಅಭಿಯಂತರರು, ಉಡುಪಿ ರವರ ಠೇವಣಿ ಖಾತೆಗೆ ಜಮೆ | 704.01 |
| | | ಒಟ್ಟು | 1590.50 |

**3.6 ಮೀನುಗಾರಿಕೆ ಬಂದರುಗಳಲ್ಲಿ ಹೂಳೆತ್ತುವಿಕೆ-ಕೇಂದ್ರ ಪುರಸ್ಕೃತಯೋಜನೆ(4405-00-103-1-02):**

ರಾಜ್ಯದಲ್ಲಿ ಕೇಂದ್ರದ ನೆರವಿನೊಂದಿಗೆ ಹಾಗೂ ರಾಜ್ಯ ಯೋಜನೆಗಳಡಿಯಲ್ಲಿ ನಿರ್ಮಿಸಿರುವ ಮೀನುಗಾರಿಕೆ ಬಂದರು ಮತ್ತು ಇಳಿದಾಣ ಕೇಂದ್ರಗಳಲ್ಲಿನ ಹೂಳಿನ ಸಮಸ್ಯೆಯನ್ನು ಬಗೆಹರಿಸಲು ಹೂಳೆತ್ತುವ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ

2020-21ನೇ ಸಾಲಿನಲ್ಲಿ ಈ ಯೋಜನೆಯಡಿ ರೂ.1.00 ಲಕ್ಷ ಮತ್ತು 0.50 ಲಕ್ಷ ಆಂಶಿಕ ಅನುದಾನ ಒದಗಿಸಲಾಗಿದೆ. ಕೇಂದ್ರದಿಂದ ಅನುದಾನ ಬಿಡುಗಡೆಯಾಗದ ಕಾರಣ ವೆಚ್ಚ ಇರುವುದಿಲ್ಲ.

**3.7 ಮಂಜುಗಡ್ಡೆ ಘಟಕಗಳು ಉಪಯೋಗಿಸಿದ ವಿದ್ಯುಚ್ಛಕ್ತಿಗೆ ಸಹಾಯಧನ (2405-00-110-0-03)**

ಈ ಯೋಜನೆಯಡಿ ಮಂಜುಗಡ್ಡೆ ಘಟಕಗಳಿಗೆ ಉಪಯೋಗಿಸಿದ ವಿದ್ಯುತ್‌ಯೂನಿಟ್‌ಗೆ ರೂ.1.75 ರಂತೆ ಪ್ರತಿ ಘಟಕಕ್ಕೆ ಗರಿಷ್ಠ ರೂ.3.50 ಲಕ್ಷದಂತೆ ಸಹಾಯಧನ ನೀಡಲು ಅವಕಾಶವಿರುತ್ತದೆ.

2020-21 ನೇ ಸಾಲಿನಲ್ಲಿ ರೂ.400.00 ಲಕ್ಷ ಅನುದಾನ ಒದಗಿಸಲಾಗಿದ್ದು ಸಾಂಪ್ರದಾಯಿಕ ದೋಣಿಗಳಿಗೆ ಸೀಮೆಎಣ್ಣೆ ಸರಬರಾಜು ಮಾಡಲು ಯೋಜನೆಯಿಂದ ರೂ.75.00 ಲಕ್ಷ ಮತ್ತು 184 ಮಂಜುಗಡ್ಡೆ ಸ್ಥಾವರಗಳಿಗೆ ಸಹಾಯಧನ ರೂ.474.26 ಲಕ್ಷಗಳ ವಿತರಿಸಲಾಗಿದೆ.

**3.8 ಕರಾವಳಿ ಕೊಂಡಿ ರಸ್ತೆಗಳ ನಿರ್ವಹಣೆ (2405-00-337-0-01)**

ರಾಜ್ಯದ ಕರಾವಳಿಯ ಮೂರು ಜಿಲ್ಲೆಗಳಲ್ಲಿ ಒಟ್ಟು 366.50 ಕಿಮೀ ಉದ್ದದ 226 ಮೀನುಗಾರಿಕೆ ಕೊಂಡಿ ರಸ್ತೆಗಳಿರುತ್ತವೆ. ಸದರಿ ಮೀನುಗಾರಿಕೆ ಕೊಂಡಿ ರಸ್ತೆಗಳ ದುರಸ್ತಿ, ಅಭಿವೃದ್ಧಿ ಮತ್ತು ನಿರ್ವಹಣೆಗೆ 2020-21 ನೇ ಸಾಲಿನಲ್ಲಿ ರೂ.200.00 ಲಕ್ಷಗಳನ್ನು ನಿಗದಿಪಡಿಸಿ ನಂತರ ಬಜೆಟ್‌ನಲ್ಲಿ ಅನುದಾನ ನೀಡಿರುವುದಿಲ್ಲ. ಆದರೆ ಪೂರಕ ಅಂದಾಜಿನಲ್ಲಿ ರೂ.2000.00ಲಕ್ಷಗಳನ್ನು ಬಿಡುಗಾಡೆ ಮಾಡಿ 29 ಮೀನುಗಾರಿಕೆ ಕೊಂಡಿ ರಸ್ತೆಗಳ ಅಭಿವೃದ್ಧಿಗಾಗಿ ರೂ.200.00ಲಕ್ಷಗಳ ವೆಚ್ಚ ಮಾಡಲಾಗಿದೆ.

**4. ಒಳನಾಡು ಮೀನುಗಾರಿಕೆ:**

2020-21ರಲ್ಲಿ ಇಲಾಖೆಯ ಮೀನುಮರಿ ಉತ್ಪಾದನಾ ಕೇಂದ್ರಗಳಲ್ಲಿ 7422.18 ಲಕ್ಷ ಫ್ರೈ ಮೀನು ಮರಿಗಳ ಉತ್ಪಾದನೆ ಮಾಡಲಾಗಿದೆ. 3145 ಇಲಾಖೆ ಕೆರೆಗಳಲ್ಲಿ 2171.62 ಲಕ್ಷ ಮೀನು ಮರಿಗಳನ್ನು ಮತ್ತು 1914 ಗ್ರಾಮ ಪಂಚಾಯತಿ ಕೆರೆಗಳಲ್ಲಿ 497.15 ಲಕ್ಷ ಮೀನು ಮರಿಗಳನ್ನು ದಾಸ್ತಾನು ಮಾಡಿ ಅಭಿವೃದ್ಧಿ ಪಡಿಸಲಾಗಿದೆ. ಸದರಿ ಸಾಲಿನಲ್ಲಿ 2.51 ಲಕ್ಷ ಮೆಟ್ರಿಕ್‌ಟನ್ ಒಳನಾಡು ಮೀನು ಉತ್ಪಾದನೆಯಾಗಿದೆ ಎಂದು ಅಂದಾಜಿಸಲಾಗಿದೆ.

**4.1 ಒಳನಾಡು ಮೀನುಗಾರಿಕೆ ಅಭಿವೃದ್ಧಿಗೆ ಸಹಾಯ (ರಾಜ್ಯ ವಲಯ) (2405-00-101-0-03):**

1. ಈ ಯೋಜನೆಯಡಿ ಮೀನುಮರಿ ಬೆಲೆಯ ಶೇ.50 ರಷ್ಟು ಅಂದರೆ ವ್ಯಕ್ತಿಗತ ಗರಿಷ್ಠ ರೂ.5,000/- ಹಾಗೂ ಸಂಘ ಸಂಸ್ಥೆಗಳಿಗೆ ಗರಿಷ್ಠ ರೂ.20,000/- ಕ್ಕೆ ಮಿತಿಗೊಳಪಟ್ಟು ಸಹಾಯಧನವನ್ನು ನೀಡಲಾಗುವುದು. ಮೀನುಗಾರಿಕೆ ಇಲಾಖೆಯಿಂದ ನೋಂದಾಯಿಸಿಕೊಂಡು ಸ್ವಂತ ಕೊಳಗಳಲ್ಲಿ ಮೀನು ಮರಿ ಪಾಲನೆ ಕೈಗೊಳ್ಳಲು ಆಸಕ್ತರಿರುವ ಮೀನು ಕೃಷಿಕರು ಪ್ರತಿ ಹೆಕ್ಟೇರ್ ಜಲವಿಸ್ತೀರ್ಣಕ್ಕೆ 50 ಲಕ್ಷ ಸ್ಪಾನ್ ಅಥವಾ 10 ಲಕ್ಷ ಫ್ರೈ ಖರೀದಿಸಲು ಶೇ.50 ರಷ್ಟು ಗರಿಷ್ಠ ರೂ.25,000 ಗಳ ಸಹಾಯಧನ ಪಡೆಯಲು ಅವಕಾಶ ಕಲ್ಪಿಸಲಾಗಿದೆ.

2. "ಮತ್ಸ್ಯ ಕೃಷಿ ಆಶಾ ಕಿರಣ" ಯೋಜನೆಯಡಿ ಕೆರೆಗಳಲ್ಲಿ ಮೀನು ಉತ್ಪಾದನೆಯನ್ನು ಹೆಚ್ಚಿಸಲು ಹಾಗೂ ಮೀನು ಕೃಷಿಗೆ ಉತ್ತೇಜನ ನೀಡಲು, ಪ್ರತಿ ಹೆಕ್ಟೇರ್‌ಗೆ 4,000 ಬಲಿತ ಮೀನು ಮರಿಗಳನ್ನು ಹಾಗೂ 2 ಟನ್ ಕೃತಕ ಆಹಾರವನ್ನು ಖರೀದಿಸಲು ಘಟಕ ವೆಚ್ಚದ ಶೇ.50 ರಷ್ಟು ಹಾಗೂ ಗರಿಷ್ಠ 27,000 ರೂ.ಗಳನ್ನು ನೀಡಲಾಗುವುದು.

3. ರಾಜ್ಯದ ಜಲ ಪ್ರದೇಶದಲ್ಲಿ ಪ್ರತಿ ಹೆಕ್ಟೇರ್ ಉಪಯುಕ್ತತಾ ಜಲವಿಸ್ತೀರ್ಣಕ್ಕೆ 2000 ಬಲಿತ ಬಿತ್ತನೆ ಮೀನುಮರಿಗಳನ್ನು ಮೀನುಗಾರರ ಸಹಕಾರ ಸಂಘಗಳ ಮುಖಾಂತರ ಉಚಿತವಾಗಿ ಬಿತ್ತನೆ ಮಾಡಲು "ಒಳನಾಡು ಮೀನು ಕೃಷಿಗೆ ಪ್ರೋತ್ಸಾಹ" ಯೋಜನೆಗೆ ಮಂಜೂರಾತಿ ನೀಡಲಾಗಿದೆ..

4. ರಾಜ್ಯದಲ್ಲಿ ಲಭ್ಯವಿರುವ ಒಳನಾಡಿನ ಸೀಗಡಿ ಮತ್ತು ಮೀನು ಸಾಗಣಿಕೆ ಮತ್ತು ಹಿನ್ನೀರು ಕೃಷಿಗೆ ಪ್ರೋತ್ಸಾಹಿಸುವುದು ಒಂದು ಹೆಕ್ಟೇರಿಗೆ ರೂ.1 ಲಕ್ಷಘಟಕ ವೆಚ್ಚದಂತೆ ಹೊಸ ಯೋಜನೆಯಾದ ಸೀಗಡಿ ಮತ್ತು ಹಿನ್ನೀರು ಮೀನು ಕೃಷಿ ಯೋಜನೆಯಡಿ ಶೇ.50ರಷ್ಟು ಸಹಾಯಧನವನ್ನು ನೀಡಲಾಗುತ್ತಿದೆ

| ಕ್ರ.ಸಂ | ಯೋಜನೆ | ವೆಚ್ಚ (ರೂ.ಗಳಲ್ಲಿ) | ಕೆರೆಗಳ ಸಂಖ್ಯೆ ಹಾಗೂ ಉಪಯುಕ್ತ ಜಲ ವಿಸ್ತೀರ್ಣ(ಹೆ) | ಮೀನುಮರಿಗಳ ಸಂಖ್ಯೆ |
|---|---|---|---|---|
| 1. | ಮೀನುಮರಿ ಖರೀದಿಗೆ ಸಹಾಯಧನ | 24.95 | 443(15029Ha) | 226.00 |
| 2. | ಮತ್ಸ್ಯ ಕೃಷಿ ಆಶಾ ಕಿರಣ | 103.36 | 86(582.05 Ha) | 23.28 |
| 3. | ಒಳನಾಡಿನ ಮೀನುಕೃಷಿಗೆ ಪ್ರೋತ್ಸಾಹ | 317.80 | 341(11702 Ha) | 234.00 |
| 4. | ಸೀಗಡಿ ಮತ್ತು ಹಿನ್ನೀರು ಮೀನು ಕೃಷಿ | | | |
| a | ಸೀಗಡಿ ಮೀನು ಕೃಷಿ | 74.83 | 500 | |
| b | ಹಿನ್ನೀರು ಮೀನು ಕೃಷಿ | 26.65 | 55(59 Ha) | |
| | **ಒಟ್ಟು** | **547.59** | | |

2020-21 ನೇ ಸಾಲಿನಲ್ಲಿ ಈ ಯೋಜನೆಯಡಿ ರೂ.850.00 ಲಕ್ಷಗಳನ್ನು ಅನುದಾನವನ್ನು ಒದಗಿಸಲಾಗಿರುತ್ತದೆ. ಇದರಲ್ಲಿ ರೂ.500.00 ಲಕ್ಷಗಳನ್ನು ಬೇರೆ ಯೋಜನೆಗಳಿಗೆ ಪುನರ್ ವಿನಿಯೋಗಿಸಲಾಗಿದೆ. ಯೋಜನೆಯಡಿ ಒಟ್ಟು ರೂ. 547.59 ಲಕ್ಷ ವೆಚ್ಚ ಮಾಡಲಾಗಿದೆ.

### 4.2 ಜಲಾಶಯದಲ್ಲಿ ಮೀನು ಮರಿ ಬಿತ್ತನೆ (2405-00-101-0-54 ):

ರಾಜ್ಯದಲ್ಲಿ ಒಟ್ಟು 82 ಜಲಾಶಯಗಳಿವೆ. ಈ ಜಲಾಶಯಗಳ ಒಟ್ಟು ಜಲ ವಿಸ್ತೀರ್ಣ 2.72 ಲಕ್ಷ ಹೆಕ್ಟೇರ್‌ಗಳಾಗಿರುತ್ತದೆ. ಜಲಾಶಯಗಳನ್ನೆ ತಮ್ಮ ಜೀವನೋಪಾಯಕ್ಕೆ ನಂಬಿರುವ ಸಾವಿರಾರು ಮೀನುಗಾರರ ಕುಟುಂಬಗಳಿವೆ. ಇತ್ತೀಚಿನ ದಿನಗಳಲ್ಲಿ ನದಿಗಳಲ್ಲಿ ಮತ್ತು ಹಲವಾರು ಜಲಾಶಯಗಳಲ್ಲಿ ಮತ್ಸ್ಯ ಸಂಪನ್ಮೂಲಗಳು ಕ್ಷೀಣಿಸಿದ್ದು ಹೆಚ್ಚಿನ ಮೀನು ಶಿಕಾರಿಯಾಗದೆ ಇದನ್ನೇ ಅವಲಂಬಿಸಿರುವ ಮೀನುಗಾರರು ಸಂಕಷ್ಟದಲ್ಲಿದ್ದಾರೆ. ಜಲಾಶಯಗಳಲ್ಲಿ ಶೀಘ್ರವಾಗಿ ಬೆಳೆಯುವ ಭಾರತದ ದೊಡ್ಡಗೆಂಡೆ ಮೀನುಗಳಾದ ಕಾಟ್ಲಾ, ರೋಹು, ಮೃಗಾಲ ತಳಿಗಳು ದಕ್ಷಿಣ ಭಾರತದ ಜಲಸಂಪನ್ಮೂಲಗಳಲ್ಲಿ ಸ್ವಾಭಾವಿಕವಾಗಿ ಉತ್ಪಾದನೆಯಾಗುವುದಿಲ್ಲವಾದ್ದರಿಂದ ಅವುಗಳನ್ನು ಆಗಿಂದಾಗ್ಗೆ ದಾಸ್ತಾನು ಮಾಡುವ ಮೂಲಕ ಸದರಿ ಸಂಪನ್ಮೂಲಗಳಲ್ಲಿ ಮತ್ಸ್ಯ ಸಂಪನ್ಮೂಲ ವೃದ್ಧಿಗೊಳಿಸುವುದು ಅತ್ಯಗತ್ಯವಾಗಿದೆ.

ಈ ಯೋಜನೆಯಡಿ ರಾಜ್ಯದ ಆಯ್ದ ಜಲಾಶಯಗಳಲ್ಲಿ ಬಲಿತ ಮೀನು ಮರಿಗಳ ಬಿತ್ತನೆ ಮಾಡಿ ಜಲಾಶಯಗಳ ಅಭಿವೃದ್ಧಿ ಕೈಗೊಳ್ಳಲಾಗುತ್ತದೆ. 2020-21 ನೇ ಸಾಲಿನಲ್ಲಿ ಈ ಯೋಜನೆಯಡಿ ರೂ.150.00 ಲಕ್ಷಗಳನ್ನು ಒದಗಿಸಲಾಗಿದ್ದು, ರೂ.148.57 ಲಕ್ಷ ವೆಚ್ಚದಲ್ಲಿ ಆಯ್ದ 37 ಜಲಾಶಯಗಳಲ್ಲಿ ಬಿತ್ತನೆ ಮಾಡಲಾಗಿದೆ.

| ಕ್ರ.ಸಂ | ವಲಯ | ಜಿಲ್ಲೆ | ತಾಲ್ಲೂಕು | ಜಲಾಶಯದ ಹೆಸರು | **ಬಿತ್ತನೆ ಮಾಡಿದ ಮೀನುಮರಿಗಳ ಸಂಖ್ಯೆ(ಲಕ್ಷಗಳಲ್ಲಿ)** | ವೆಚ್ಚ ರೂ |
|---|---|---|---|---|---|---|
| 1 | ಬೆಳಗಾವಿ | ವಿಜಯಪುರ | ಮುದ್ದೆಬಿಹಾಳ | ಬಸವಸಾಗರ | 1,053,000 | 868,460 |
| 2 | ಬೆಳಗಾವಿ | ಬೆಳಗಾವಿ | ಹುಕ್ಕೇರಿ | ಘಟಪ್ರಭಾ | 748,000 | 720,000 |
| 3 | ಬೆಳಗಾವಿ | ಬೆಳಗಾವಿ | ಸೌಂದತ್ತಿ | ಮಲಪ್ರಭಾ | 701,000 | 661,680 |
| 4 | ಬೆಳಗಾವಿ | ಬೆಳಗಾವಿ | ಬೆಳಗಾವಿ | ರಾಕ್ಕಸಕೊಪ್ಪ | 199,000 | 189,600 |
| 5 | ಬೆಳಗಾವಿ | ಬೆಳಗಾವಿ | ಬೆಳಗಾವಿ | ಮಾರ್ಕಂಡೇಯ | 399,000 | 381,600 |
| 6 | ಬೆಳಗಾವಿ | ಬೆಳಗಾವಿ | ಬೈಲಹೊಂಗಲ | ತಿಗಡಿಹಾರಿನಾಳ | 280,000 | 263,000 |
| 7 | ಬೆಳಗಾವಿ | ಬಾಗಲಕೋಟೆ/ ವಿಜಯಪುರ | ಬಾಗಲಕೋಟೆ/ ವಿಜಯಪುರ | ಅಲಮಟ್ಟಿ | 1,915,000 | 1,800,900 |
| 8 | ಬೆಳಗಾವಿ | ಧಾರವಾಡ | ಕಲಘಟಗಿ | ನೀರಸಾಗರ | 199,000 | 180,800 |
| 9 | ಮೈಸೂರು | ಮಂಡ್ಯ | ಶ್ರೀರಂಗಪಟ್ಟಣ | ಕೆ.ಆರ್.ಎಸ್ | 969,000 | 874,640 |
| 10 | ಮೈಸೂರು | ಹಾಸನ | ಬೇಲೂರು | ಯಗಚಿ | 352,500 | 306,000 |

| | | | | | | |
|---|---|---|---|---|---|---|
| 11 | ಮೈಸೂರು | ಹಾಸನ | ಹಾಸನ | ಹೇಮಾವತಿ | 791,000 | 686,800 |
| 12 | ಮೈಸೂರು | ಹಾಸನ | ಬೇಲೂರು | ವಾಟೆಹೊಳೆ | 277,900 | 243,320 |
| 13 | ಶಿವಮೊಗ್ಗ | ಚಿತ್ರದುರ್ಗ | ಮೊಳಕಾಲ್ಮೂರು | ರಂಗಯ್ಯನ ದುರ್ಗ | 158,000 | 147,200 |
| 14 | ಶಿವಮೊಗ್ಗ | ಚಿತ್ರದುರ್ಗ | ಹಿರಿಯೂರು | ವಿ.ವಿ.ಸಾಗರ | 293,500 | 254,000 |
| 15 | ಶಿವಮೊಗ್ಗ | ಶಿವಮೊಗ್ಗ | ಹೊಸನಗರ | ಚಕ್ರ | 300,000 | 255,000 |
| 16 | ಶಿವಮೊಗ್ಗ | ಚಿಕ್ಕಮಗಳೂರು | ನರಸಿಂರಾಜಪುರ | ಭದ್ರಾ | 920,000 | 784,000 |
| 17 | ಶಿವಮೊಗ್ಗ | ಶಿವಮೊಗ್ಗ | ಶಿವಮೊಗ್ಗ | ತುಂಗಾ | 199,000 | 169,200 |
| 18 | ಶಿವಮೊಗ್ಗ | ಶಿವಮೊಗ್ಗ | ಸಾಗರ | ಲಿಂಗನಮಕ್ಕಿ | 900,000 | 766,000 |
| 19 | ಶಿವಮೊಗ್ಗ | ಶಿವಮೊಗ್ಗ | ಸಾಗರ | ತಲಕಳಲೆ | 400,000 | 344,000 |
| 20 | ಶಿವಮೊಗ್ಗ | ಶಿವಮೊಗ್ಗ | ಶಿಕಾರಿಪುರ | ಅಂಜನಾಪುರ | 289,000 | 246,200 |
| 21 | ಶಿವಮೊಗ್ಗ | ಶಿವಮೊಗ್ಗ | ಹೊಸನಗರ | ಸಾವೆಹಕ್ಲು | 472,000 | 402,600 |
| 22 | ಶಿವಮೊಗ್ಗ | ಶಿವಮೊಗ್ಗ | ಸಾಗರ | ಸಿರೂರ್ | 100,000 | 86,000 |
| 23 | ಶಿವಮೊಗ್ಗ | ಚಿತ್ರದುರ್ಗ | ಹಿರಿಯೂರು | ಗಾಯಿತ್ರಿ | 162,000 | 148,800 |
| 24 | ಶಿವಮೊಗ್ಗ | ಚಿಕ್ಕಮಗಳೂರು | ತರೀಕೆರೆ | ಜಂಬದಹಳ್ಳ | 100,000 | 85,000 |
| 25 | ಶಿವಮೊಗ್ಗ | ಶಿವಮೊಗ್ಗ | ಶಿಕಾರಿಪುರ | ಅಂಬ್ಲಿಗೋಳ | 388,000 | 330,400 |
| 26 | ಶಿವಮೊಗ್ಗ | ದಾವಣಗೆರೆ | ಚನ್ನಗಿರಿ | ಶಾಂತಿಸಾಗರ | 685,000 | 583,000 |
| 27 | ಶಿವಮೊಗ್ಗ | ಶಿವಮೊಗ್ಗ | ತೀರ್ಥಹಳ್ಳಿ | ವಾರಾಹಿ | 298,000 | 256,400 |
| 28 | ಬಳ್ಳಾರಿ | ಬೀದರ್ | ಬಾಲ್ಕಿ | ಕಾರಂಜಾ | 300,000 | 245,000 |
| 29 | ಬಳ್ಳಾರಿ | ಕೊಪ್ಪಳ | ಕೊಪ್ಪಳ | ಹಿರೇಹಳ್ಳ | 300,000 | 255,000 |
| 30 | ಬಳ್ಳಾರಿ | ಕಲಬುರ್ಗಿ | ಅಫ್ಜಲ್‌ಪುರ | ಭೀಮಾಲಿಫ್ಟ್ | 300,000 | 245,000 |
| 31 | ಬಳ್ಳಾರಿ | ಕಲಬುರ್ಗಿ | ಕಲಬುರ್ಗಿ | ಗಂಡೋರಿ ನಾಲಾ | 300,000 | 245,000 |
| 32 | ಬಳ್ಳಾರಿ | ಬಳ್ಳಾರಿ | ಸಂಡೂರು | ನಾರಿಹಳ್ಳ | 200,000 | 170,000 |
| 33 | ಬೆಂಗಳೂರು | ತುಮಕೂರು | ಕುಣಿಗಲ್ | ಮಾರ್ಕೋನಹಳ್ಳಿ | 297,500 | 265,000 |
| 34 | ಬೆಂಗಳೂರು | ಬೆಂಗಳೂರು(ನಗರ) | ಹೆಸರಘಟ್ಟ | ಹೆಸರಘಟ್ಟ | 186,000 | 172,160 |
| 35 | ಬೆಂಗಳೂರು | ತುಮಕೂರು | ಚಿಕ್ಕನಾಯಕನಹಳ್ಳಿ | ಬೋರನಕಣಿವೆ | 199,000 | 180,000 |
| 36 | ಬೆಂಗಳೂರು | ಕೋಲಾರ | ಬಂಗಾರಪೇಟೆ | ಬೇತಮಂಗಲ | 200,000 | 167,000 |
| 37 | ಕಾರವಾರ | ಉತ್ತರ ಕನ್ನಡ | ಮುಂಡಗೋಡು | ಧರ್ಮಾ | 260,000 | 223,224 |
| | 2019–20 | | | | | 606000 |
| | 2018–19 | | | | | 50000 |
| | | | | **ಒಟ್ಟು** | **16,091,400** | **14,857,984** |

**4.3 ಉತ್ತರ ಕರ್ನಾಟಕ ಒಳನಾಡು ಮೀನುಗಾರಿಕೆ ಅಭಿವೃದ್ಧಿ ಕೇಂದ್ರ ಸ್ಥಾಪನೆ (2405–00–101–0–67)**

ಉತ್ತರ ಕರ್ನಾಟಕದಲ್ಲಿ ಸುಮಾರು 1.64 ಲಕ್ಷ ಹೆಕ್ಟೇರ್ ವಿಸ್ತೀರ್ಣದ ಜಲಾಶಯಗಳು 42,195 ಹೆಕ್ಟೇರ್ ವಿಸ್ತೀರ್ಣದ ದೊಡ್ಡಕೆರೆಗಳು, 20,667 ಹೆಕ್ಟೇರ್ ವಿಸ್ತೀರ್ಣದ ಗ್ರಾಮ ಪಂಚಾಯತ್ ಕೆರೆಗಳು, ನದಿಗಳು ಮತ್ತು ಕಾಲುವೆಗಳಿದ್ದು, ಒಳನಾಡು ಮೀನುಗಾರಿಕೆ ಅಭಿವೃದ್ಧಿಗೆ ವಿಫುಲ ಅವಕಾಶವನ್ನು ನೀಡುತ್ತವೆ. ಈ ಹಿನ್ನೆಲೆಯಲ್ಲಿ ಇಲಾಖೆಯ ಅಧಿಕಾರಿಗಳನ್ನೊಳಗೊಂಡ "ನಿಜಶರಣ ಅಂಬಿಗರ ಚೌಡಯ್ಯ ಉತ್ತರ ಕರ್ನಾಟಕ ಒಳನಾಡು ಮೀನುಗಾರಿಕೆ ಅಭಿವೃದ್ಧಿ" ಎಂಬ ಸಂಸ್ಥೆಯನ್ನು ಸ್ಥಾಪಿಸಲಾಗಿದೆ. ಈ ಸಂಸ್ಥೆಯ ಮುಖ್ಯ ಉದ್ದೇಶಗಳೆಂದರೆ: ಉತ್ತರ ಕರ್ನಾಟಕದ ಸಮಗ್ರ ಮೀನುಗಾರಿಕೆ ಅಭಿವೃದ್ಧಿಗೆ ಸ್ಥಳೀಯ ಅಗತ್ಯತೆಗೆ ಅನುಗುಣವಾಗಿ ಕಾರ್ಯಕ್ರಮಗಳನ್ನು ರೂಪಿಸಿ, ಅನುಷ್ಠಾನಗೊಳಿಸುವುದು, ಅಗತ್ಯ ಯೋಜನಾ ವರದಿ ಸಿದ್ಧಪಡಿಸಿ ವಿವಿಧ ಮೂಲಗಳಿಂದ ಮೀನುಗಾರಿಕೆ ಚಟುವಟಿಕೆಗಳಿಗೆ ಅನುದಾನವನ್ನು ಪಡೆದುಕಾರ್ಯಕ್ರಮ ಅನುಷ್ಠಾನಗೊಳಿಸುವುದು ಮತ್ತು ಮೀನುಗಾರಿಕೆ ಶಿಕ್ಷಣ, ಸಂಶೋಧನೆ, ವಿಸ್ತರಣೆ ಮತ್ತು ಅಭಿವೃದ್ದಿಯಲ್ಲಿ ನಿರತರಾಗಿರುವ ಸಂಸ್ಥೆಗಳು ಹಾಗೂ ಮೀನುಗಾರರ ಸಂಘಟನೆಗಳ ಸಹಯೋಗದೊಂದಿಗೆ ಉತ್ತರ ಕರ್ನಾಟಕದ ಮೀನುಗಾರಿಕೆ ಮತ್ತು ಮೀನು ಕೃಷಿ ಅಭಿವೃದ್ಧಿಗೆ ಕ್ರಮವಹಿಸುವುದು.

2020–21 ನೇ ಸಾಲಿನಲ್ಲಿ ಈ ಯೋಜನೆಯಡಿ ರೂ.100.00 ಲಕ್ಷ ಅನುದಾನ ಒದಗಿಸಲಾಗಿದ್ದು, ಸಂಪೂರ್ಣ ಮೊತ್ತವನ್ನು "ಉತ್ತರ ಕರ್ನಾಟಕ ಒಳನಾಡು ಮೀನುಗಾರಿಕೆ ಅಭಿವೃದ್ಧಿ" ಸಂಸ್ಥೆಗೆ ವರ್ಗಾಯಿಸಲಾಗಿದೆ.

**4.4 ಒಳನಾಡು ಮೀನುಗಾರರಿಗೆ ಸಲಕರಣೆ ಕಿಟ್‌ಗಳ ವಿತರಣೆ (2405–00–110–0–02)**

ಮೀನುಗಾರರ ಶ್ರೇಯೋಭಿವೃದ್ಧಿ ಮತ್ತು ಅವರ ಜೀವರಕ್ಷಣೆಯ ದೃಷ್ಟಿಯಿಂದ ಮೀನುಗಾರಿಕೆ ಇಲಾಖೆಯು **"ಒಳನಾಡು ಮೀನುಗಾರರಿಗೆ ಫೈಬರ್‌ಗ್ಲಾಸ್ ಹರಿಗೋಲುಗಳ ವಿತರಣೆ"** ಎಂಬ ಕಾರ್ಯಕ್ರಮವನ್ನು ರೂಪಿಸಿದೆ. ಫೈಬರ್‌ಗ್ಲಾಸ್ ಹರಿಗೋಲುಗಳು ಸದೃಢವಾಗಿದ್ದು ಮೀನುಗಾರರು ಆಳನೀರಿನಲ್ಲಿ ಮೀನುಗಾರಿಕೆಯಲ್ಲಿ ತೊಡಗಲು ಹಾಗೂ ಜೀವರಕ್ಷಣೆ ದೃಷ್ಟಿಯಿಂದ ಸಹಕಾರಿಯಾಗಿರುವುದಲ್ಲದೆ ದೀರ್ಘ ಬಾಳಿಕೆಯನ್ನು ನೀಡುತ್ತವೆ. 2018-19 ನೇ ಸಾಲಿನಲ್ಲಿ ಮೀನು ಮರಿಗಳನ್ನು ಹಿಡಿಯುವುದನ್ನು ತಪ್ಪಿಸಿ ಮತ್ಸ್ಯ ಸಂಪತ್ತನ್ನು ರಕ್ಷಿಸಲು ಮೀನುಗಾರರಿಗೆ ಕಾಡ್‌ಎಂಡ್‌ನಲ್ಲಿ 35 ಎಂಎಂ ಸ್ಕ್ವೇರ್ ಮೆಶ್ ಬಲೆಗಳನ್ನು ಉಚಿತವಾಗಿ ನೀಡಲು ಉದ್ದೇಶಿಸಲಾಗಿದೆ.

ಈ ನಿಟ್ಟಿನಲ್ಲಿ ರಾಜ್ಯದ ಎಲ್ಲಾ ಒಳನಾಡು ಪ್ರದೇಶಗಳ ಕೆರೆ, ಜಲಾಶಯ ಹಾಗೂ ನದಿಭಾಗಗಳಲ್ಲಿ ಮೀನುಗಾರಿಕೆಯಲ್ಲಿ ತೊಡಗಿರುವ ಮೀನುಗಾರರಿಗೆ ಸದರಿ ಯೋಜನೆಯಡಿ ತಲಾ ಒಂದು ಫೈಬರ್‌ಗ್ಲಾಸ್ ಹರಿಗೋಲು ಹಾಗೂ ಎರಡು ಹುಟ್ಟುಗಳನ್ನು ರೂ.10,000/- ಘಟಕ ವೆಚ್ಚದಲ್ಲಿ 100% ಸಹಾಯಧನದಲ್ಲಿ ನೀಡಲು ಅವಕಾಶ ಮಾಡಲಾಗಿದೆ.

2020-21ನೇ ಸಾಲಿನಲ್ಲಿ ರೂ.350.00 ಲಕ್ಷ ಒದಗಿಸಲಾಗಿದ್ದು ಇದರಲ್ಲಿ ರೂ.200.ಲಕ್ಷಗಳ ಅನುದಾನವನ್ನು ಬಿಡುಗಾಡೆಯಾಗಿರುತ್ತದೆ.ಅದರಲ್ಲಿ ರೂ.199.71ಲಕ್ಷಗಳ ವೆಚ್ಚವಾಗಿದೆ. ಮೀನುಗಾರಿಕೆ ಸಲಕರಣೆಗಳನ್ನು ಒಟ್ಟು 1997 ಫಲಾನುಭವಿಗಳಿಗೆ ವಿತರಿಸಲಾಗಿದೆ.

**5. ಮೀನುಗಾರರ ಕಲ್ಯಾಣ ಯೋಜನೆಗಳು:**

**5.1 ಸಂಕಷ್ಟ ಪರಿಹಾರ ನಿಧಿ (2405-00-103-0-15):**

ಸಂಕಷ್ಟ ಪರಿಹಾರ ನಿಧಿಗೆ ಸರ್ಕಾರದಿಂದ ಮೂಲ ಬಂಡವಾಳ ನೀಡುವ ಸಲುವಾಗಿ ಆಯವ್ಯಯದಲ್ಲಿ ಅವಕಾಶ ಕಲ್ಪಿಸಲಾಗಿದೆ. ಈ ನಿಧಿಯಿಂದ ಮೀನುಗಾರಿಕೆಯಲ್ಲಿ ತೊಡಗಿರುವಾಗ ನೈಸರ್ಗಿಕ ವಿಕೋಪಗಳಿಂದ ಮರಣ ಹೊಂದಿದ ಮೀನುಗಾರರ ಆವಲಂಬಿತರಿಗೆ ರೂ.3,00,000/- ಗಳ ಪರಿಹಾರ ಮತ್ತು ಭಾಗಶಃ ಅಂಗವಿಕಲರಾದವರಿಗೆ ರೂ.1,00,000 ಗಳ ಪರಿಹಾರ ನೀಡಲು ಹಾಗೂ ಬಲೆಹಾನಿ, ದೋಣಿಹಾನಿ ವೆಚ್ಚಗಳಿಗೆ ಮತ್ತು ವೈದ್ಯಕೀಯ ವೆಚ್ಚಗಳಿಗೆ ಗರಿಷ್ಠ ರೂ.1,00,000/- ನೆರವು ನೀಡಲು ಅವಕಾಶವಿದೆ. ಸಮುದ್ರದಲ್ಲಿ ಮೀನುಗಾರಿಕೆ ಮಾಡುವಾಗ ಪ್ರಕೃತಿ ವಿಕೋಪದಿಂದ ದೋಣಿ ಅವಘಡದಿಂದ ಮೃತರಾದ ಮೀನುಗಾರರ ಕುಟುಂಬದವರಿಗೆ ರೂ.6.00 ಲಕ್ಷ ಪರಿಹಾರ ನೀಡಲಾಗುವುದು.

2020-21 ನೇ ಸಾಲಿನಲ್ಲಿ ಸದರಿ ಯೋಜನೆಯಡಿ 115 ಪ್ರಕರಣಗಳನ್ನು (ಮರಣ:78 ಪ್ರಕರಣ, ರೂ.393.00 ಲಕ್ಷ; ದೋಣಿ ಹಾನಿ:28 ಪ್ರಕರಣ, ರೂ.22.26 ಲಕ್ಷ; ಬಲೆ ಹಾನಿ:08 ಪ್ರಕರಣ, ರೂ.7.13 ಲಕ್ಷ; ವೈದ್ಯಕಿಯ ಅವಶ್ಯಕತೆಗಳು:01 ಪ್ರಕರಣ, ರೂ.0.25 ಲಕ್ಷ ) ಇತ್ಯರ್ಥಗೊಳಿಸಿ ಮೀನುಗಾರರಿಗೆ ಒಟ್ಟು ರೂ.422.64 ಲಕ್ಷ ಪರಿಹಾರ ನೀಡಲಾಗಿದೆ.

**5.2 ಸಾಮೂಹಿಕ ಅಪಘಾತ ವಿಮಾ ಯೋಜನೆ (2405-00-120-0-07-106):**

ಕೇಂದ್ರ ಪುರಸ್ಕೃತ ಸಾಮೂಹಿಕ ಅಪಘಾತ ವಿಮಾಯೋಜನೆಯಡಿಯಲ್ಲಿ ಮೀನುಗಾರರ ವಿಮಾಕಂತಿನ ಹಣತಲಾ ರೂ.20.27 ಗಳನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಪ್ರತಿಶತ 50 ರಂತೆ ಪ್ರತಿ ವರ್ಷ ದೆಹಲಿಯಲ್ಲಿರುವ ಮೀನುಗಾರಿಕೆ ಸಹಕಾರಿ ಸಂಘಗಳ ರಾಷ್ಟ್ರೀಯ ಮಹಾಮಂಡಳಿಗೆ (ಫಿಶ್ಕೋಫೆಡ್) ರಾಜ್ಯದ 2.04 ಲಕ್ಷ ಮೀನುಗಾರರಿಗೆ ವಿಮಾ ಸೌಲಭ್ಯ ಒದಗಿಸಲು ಪಾವತಿ ಮಾಡಲಾಗಿದೆ. 2020-21ನೇ ಸಾಲಿನಲ್ಲಿ ರೂ.12.28 ಲಕ್ಷ ವಿಮಾಕಂತನ್ನು ರಾಜ್ಯ ಸರ್ಕಾರವು ಫಿಶ್ಕೋಫೆಡ್, ನವದೆಹಲಿಗೆ ಪಾವತಿಸಿದೆ.

**5.3. ಕರಾವಳಿ ಮೀನುಗಾರರಿಗೆ ಕೇಂದ್ರ ಪುರಸ್ಕೃತ ಉಳಿತಾಯ ಮತ್ತು ಪರಿಹಾರಯೋಜನೆ (2405-00-120-0-07-100):**

ಸದರಿ ಯೋಜನೆಯಡಿಯಲ್ಲಿ ಮೀನುಗಾರಿಕೆ ಅವಧಿಯಲ್ಲಿ ಕರಾವಳಿ ಮೀನುಗಾರರಿಂದ ರೂ.1500 ಗಳನ್ನು ವಸೂಲಿ ಮಾಡಲಾಗುತ್ತದೆ. ಈ ರೀತಿ ವಸೂಲಿ ಮಾಡಿದ ಮೊತ್ತ ರೂ. 1500 ಗಳಿಗೆ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳು ತಲಾ ರೂ.1500 ಗಳನ್ನು ನೀಡಿ, ಹೀಗೆ ಸಂಗ್ರಹಿಸಿದ ಒಟ್ಟು ರೂ.4500/-ಗಳನ್ನು ಮೀನುಗಾರಿಕೆ ಇಲ್ಲದ ಮೂರು ತಿಂಗಳಲ್ಲಿ ಮಾಸಿಕ ತಲಾ ರೂ. 1500 ಗಳನ್ನು ಮೀನುಗಾರರಿಗೆ ನೀಡಲಾಗುವುದು.

2020-21ನೇ ಸಾಲಿನಲ್ಲಿ ಈ ಯೋಜನೆಯಡಿ ರೂ.50.00 ಲಕ್ಷಗಳ ಆಂಶಿಕ ಅನುದಾನ ಒದಗಿಸಲಾಗಿತ್ತು. ರಾಜ್ಯ ಮತ್ತು ಕೇಂದ್ರವು 50:50 ಹಂಚಿಕೆಯ ಆಧಾರದ ಮೇಲೆ ಯೋಜನೆಯನ್ನು ಕಾರ್ಯಗತಗೊಳಿಸುತ್ತದೆ. ರೂ. 716.75 ಲಕ್ಷವನ್ನು ರಾಜ್ಯ ಸರ್ಕಾರ ಬಿಡುಗಡೆ ಮಾಡಿದೆ ಮತ್ತು ಹೊಂದಾಣಿಕೆಯ ಪಾಲನ್ನು ಕೇಂದ್ರ ಸರ್ಕಾರ ಬಿಡುಗಡೆ ಮಾಡಿದೆ. ರೂ. 1433.42 ಲಕ್ಷ ಗಳಿಸಲಾಗಿದ್ದು, **34,468** ಮೀನುಗಾರರು ಇದರ ಲಾಭವನ್ನು ಪಡೆದಿದ್ದಾರೆ.

### 5.4 ಗಿರಿಜನಉಪಯೋಜನೆ (2405–00–790–0–00)

ಈ ಯೋಜನೆಯಡಿ ಮೀನುಗಾರಿಕೆ ಚಟುವಟಿಕೆಗಳಲ್ಲಿ ತೊಡಗಿರುವ ಪರಿಶಿಷ್ಠ ಪಂಗಡಕ್ಕೆ ಸೇರಿದ ಫಲಾನುಭವಿಗಳಿಗೆ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. 2020–21 ನೇ ಸಾಲಿನಲ್ಲಿ ಸಂಚಾರಿ/ ರೀಟೇಲ್ ಮೀನು ಕ್ಯಾಂಟೀನ್/ ತಾಜಾ ಮೀನು ಮಾರಾಟ ವಾಹನಗಳನ್ನು ಖರೀದಿಸಲು ಅವಕಾಶ ಮಾಡಲಾಗಿದೆ. ಈ ಸಾಲಿನಲ್ಲಿ ರೂ.40.00 ಲಕ್ಷಗಳ ಅನುದಾನ ನಿಗಧಿ ಪಡಿಸಲಾಗಿರುತ್ತದೆ. ಸದರಿ ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ ರೂ.39.19 ಲಕ್ಷಗಳನ್ನು ವೆಚ್ಚ ಮಾಡಲಾಗಿದೆ. 08 ಫಲಾನುಭವಿಗಳು ಈ ಯೋಜನೆಯ ಪ್ರಯೋಜನ ಪಡೆದಿರುತ್ತಾರೆ.

### 6. ಮೀನುಗಾರರ ಸಹಕಾರ ಸಂಘಗಳು:

ರಾಜ್ಯದಲ್ಲಿ 654 ಮೀನುಗಾರಿಕೆ ಸಹಕಾರ ಸಂಘಗಳು ಅಸ್ತಿತ್ವದಲ್ಲಿದ್ದು, ಇವುಗಳಲ್ಲಿ 592 ಸಂಘಗಳು ಕಾರ್ಯಾಚರಣೆಯಲ್ಲಿದ್ದು 62 ಸಂಘಗಳು ಸ್ಥಗಿತಗೊಂಡಿರುತ್ತವೆ. ಇವುಗಳಲ್ಲದೆ ಕರಾವಳಿ ಜಿಲ್ಲೆಗಳಲ್ಲಿ ಎರಡು ಮೀನು ಮಾರಾಟ ಮಹಾಮಂಡಳಿಗಳು ಮತ್ತು ಒಳನಾಡಿನಲ್ಲಿ ಒಂದುರಾಜ್ಯ ಮಟ್ಟದ ಮಹಾಮಂಡಳಿ ಕಾರ್ಯಾಚರಣೆಯಲ್ಲಿವೆ. ಮೀನುಗಾರಿಕೆ ಸಹಕಾರ ಸಂಘಗಳಲ್ಲಿ ಒಟ್ಟು 2.04 ಲಕ್ಷ ಸದಸ್ಯರಿರುತ್ತಾರೆ.

### 7. ಇತರೆ ಯೋಜನೆಗಳು:

### 8.1 ವಾಣಿಜ್ಯ ಬ್ಯಾಂಕುಗಳಿಗೆ ಬಡ್ಡಿ ವ್ಯತ್ಯಾಸವನ್ನುತುಂಬಿಕೊಡುವುದು (2405–00–195–0–01):

ಮೀನುಗಾರರು ಮೀನುಗಾರಿಕೆ ಚಟುವಟಿಕೆ ಕೈಗೊಳ್ಳಲು ವಾಣಿಜ್ಯ ಬ್ಯಾಂಕಿನಿಂದ ಶೇ.2 ರ ಬಡ್ಡಿದರದಲ್ಲಿ ರೂ.50,000 ಗಳ ವರೆಗೆ ಸಾಲ ಪಡೆಯಲುಅವಕಾಶವಿರುತ್ತದೆ. ವಾಣಿಜ್ಯ ಬ್ಯಾಂಕುಗಳು ಮೀನುಗಾರರಿಗೆ ಸಾಲ ನೀಡಿದ ಪ್ರಯುಕ್ತ ವ್ಯತ್ಯಾಸದ ಬಡ್ಡಿಯನ್ನುತುಂಬಿಕೊಡಲು ಅವಕಾಶ ಕಲ್ಪಿಸಲಾಗಿದೆ.

2019–20ನೇ ಸಾಲಿನಿಂದ ಮೀನುಗಾರಿಕೆ ಚಟುವಟಿಕೆಗಳನ್ನು ಕೈಗೊಳ್ಳಲು ಮಹಿಳಾ ಮೀನುಗಾರರಿಗೆ 50,000 ರೂ.ಗಳವರೆಗೆ ಸಾಲವನ್ನು ಶೂನ್ಯ ಬಡ್ಡಿದರದಲ್ಲಿ ವಾಣಿಜ್ಯ / ಪ್ರಾದೇಶಿಕ ಗ್ರಾಮೀಣ ಬ್ಯಾಂಕ್‌ಗಳಿಂದ ಪಡೆಯಲು ಅವಕಾಶ ಮಾಡಲಾಗಿದೆ.

2020–21ನೇ ಸಾಲಿನಲ್ಲಿ ಈ ಯೋಜನೆಗೆ ರೂ.50.00 ಲಕ್ಷವನ್ನು ಒದಗಿಸಲಾಗಿದೆ. ರೂ.50.00ಲಕ್ಷ ವೆಚ್ಚದಲ್ಲಿ ಒಟ್ಟು **2331** ಮೀನುಗಾರರಿಗೆ ಈ ಸೌಲಭ್ಯ ನೀಡಲಾಗಿದೆ.

### 8.2 PMMSY – ಮೀನುಗಾರಿಕೆಯ ಸಮಗ್ರ ಅಭಿವೃದ್ಧಿ ಮತ್ತು ನಿರ್ವಹಣೆ (2405–00–101–0–58)

ಮುಂದಿನ 05 ವರ್ಷಗಳಲ್ಲಿ ಮೀನುಗಾರಿಕೆ ವಲಯದಲ್ಲಿ ಮಹತ್ತರ ಬೆಳವಣಿಗೆ ತರುವ ಸಲುವಾಗಿ ಕೇಂದ್ರ ಸರ್ಕಾರವು ಕೇಂದ್ರ ಪುರಸ್ಕೃತ **PMMSY–** ಸಮಗ್ರ ಮೀನುಗಾರಿಕೆ ಅಭಿವೃದ್ಧಿ ಮತ್ತು ನಿರ್ವಹಣೆ ಎಂಬ ಮಹತ್ವಾಕಾಂಕ್ಷಿ ಯೋಜನೆಯನ್ನು ಜಾರಿಗೆ ತಂದಿದೆ. ಈ ಯೋಜನೆಯಡಿ ಮೀನುಗಾರಿಕೆ ವಲಯದ ಮತ್ತು ಮೀನುಗಾರರ ಸಾಮಾಜಿಕ ಮತ್ತು ಆರ್ಥಿಕ ಸರ್ವತೋಮುಖ ಅಭಿವೃದ್ಧಿಗಾಗಿ ಈ ಕೆಳಕಂಡ ವಿವಿಧ ಕಾರ್ಯಕ್ರಮಗಳನ್ನು ಅಳವಡಿಸಲಾಗಿದೆ.

2020–21ನೇ ಸಾಲಿನಲ್ಲಿ ಈ ಯೋಜನೆಯ ಅನುಷ್ಠಾನಕ್ಕಾಗಿ ರೂ.1100.00 ಲಕ್ಷಗಳನ್ನು ಕಾಯ್ದಿರಿಸಲಾಗಿರುತ್ತದೆ. ಹೆಚ್ಚುವರಿಯಾಗಿ ರೂ.3600.85 ಲಕ್ಷಗಳು ನೀಡಲಾಗಿದೆ. ಇದರಿಂದಾಗಿ ಒಟ್ಟು ರೂ.4700.85 ಲಕ್ಷಗಳು ಈ ಯೋಜನೆಯ ಅನುಷ್ಠಾನಕ್ಕಾಗಿ ಬಿಡುಗಡೆಗೊಳಿಸಿದಂತಾಗುತ್ತದೆ. ಇದರಲ್ಲಿ ರೂ.4462.72 ಲಕ್ಷಗಳನ್ನು ವೆಚ್ಚ ಮಾಡಲಾಗಿದೆ.

| ಕ್ರಸಂ | ವಿವರ | ಘಟಕ | ಪೂರ್ಣಗೊಂಡಿರುವ ಘಟಕಗಳು | ಮೊತ್ತ (ರೂ.ಲಕ್ಷಗಳಲ್ಲಿ) |
|---|---|---|---|---|
| 01. | ಹಿನ್ನೀರು ಬೈಯೋಫ್ಲಕ್ಸ್ ಘಟಕ–0.1ಹೆ | ಸಂಖ್ಯೆ | 06 | 57.60 |
| 02. | ಹಿನ್ನೀರು ಪಂಜರ ಕೃಷಿ | ಸಂಖ್ಯೆ | 26 | 42.60 |
| 03. | ಮೀನು ಮಾರಟ ಮಳಿಗೆಗಳ ನಿರ್ಮಾಣ | ಸಂಖ್ಯೆ | 2 | 20.00 |
| 04. | ಸಿಹಿನೀರು ಮೀನಿನ ಹ್ಯಾಚರಿ ನಿರ್ಮಾಣ | ಸಂಖ್ಯೆ | 01 | 0 |
| 05. | ಮಂಜುಗಡ್ಡೆ ಸ್ಥಾವರಗಳ ನಿರ್ಮಾಣ–10ಟನ್ | ಸಂಖ್ಯೆ | 02 | 32.00 |
| 06. | ಮಂಜುಗಡ್ಡೆ ಸ್ಥಾವರಗಳ ನಿರ್ಮಾಣ–20ಟನ್ | ಸಂಖ್ಯೆ | 03 | 106.51 |
| 07. | ಮಂಜುಗಡ್ಡೆ ಸ್ಥಾವರಗಳ ನಿರ್ಮಾಣ–30ಟನ್ | ಸಂಖ್ಯೆ | 04 | 200.00 |
| 08. | ಮಂಜುಗಡ್ಡೆ ಸ್ಥಾವರಗಳ ನಿರ್ಮಾಣ–50ಟನ್ | ಸಂಖ್ಯೆ | 4 | 300.00 |

| | | | | |
|---|---|---|---|---|
| 09. | ಹೊಸ ಮೀನುಕೊಳ ನಿರ್ಮಾಣ ಹಾಗೂ ಹೂಡಿಕೆ ವೆಚ್ಚ | ಹೆ | 313.35 | 1432.78 |
| 10. | ಬೈಸೈಕಲ್ ಹಾಗೂ ಐಸ್ ಬಾಕ್ಸ್ | ಸಂಖ್ಯೆ | 03 | 0.04762 |
| 11. | ಆಳ ಸಮೂದ್ರ ದೋಣಿ | ಸಂಖ್ಯೆ | 0 | 0 |
| 12. | ಮೀನುಮರಿ ಪಾಲನ ಘಟಕಗಳು | ಹೆ | 5.9264 | 22.16 |
| 13. | ಸಿಹಿನೀರು ಬೈಯೋಫಲ್ಕ್ ಘಟಕ-01ಹೆ | ಸಂಖ್ಯೆ | 8 | 39.90 |
| 14. | ಜೀವಂತ ಮೀನು ಮಾರಟ ಕೇಂದ್ರಗಳು | ಸಂಖ್ಯೆ | 2 | 0.00 |
| 15. | ಮೀನುಗಾರಿಕೆ ನಿಷೇಧ / ನೇರ ಅವಧಿಯಲ್ಲಿ ಮೀನುಗಾರಿಕೆ ಸಂಪನ್ಮೂಲಗಳ ಸಂರಕ್ಷಣೆಗಾಗಿ ಸಾಮಾಜಿಕ-ಆರ್ಥಿಕವಾಗಿ ಹಿಂದುಳಿದ ಸಕ್ರಿಯ ಸಾಂಪ್ರದಾಯಿಕ ಮೀನುಗಾರರ ಕುಟುಂಬಗಳಿಗೆ ಜೀವನೋಪಾಯ ಮತ್ತು ಪೌಷ್ಠಿಕಾಂಶದ ಬೆಂಬಲ. | ಸಂಖ್ಯೆ | 12000 | 360.00 |
| 16. | ಮಂಜೂಗಡ್ಡೆ ಸ್ಥಾವರಗಳ/ ಕೋಲ್ಡ್ ಸ್ಟೋರೇಜ್‌ಗಳ ಅಧುನೀಕರಣ | ಸಂಖ್ಯೆ | 9 | 190.71 |
| 17. | ದೋಣಿ ಹಾಗೂ ಮೀನು ಹಿಡಿಯುವ ಬಲೆಗಳ ಖರೀದಿಗೆ ಸಹಾಯ | ಸಂಖ್ಯೆ | 30 | 64.80 |
| 18. | ಶಾಖ ನಿರೋದಕ ವಾಹನಗಳ ಖರೀದಿ | ಸಂಖ್ಯೆ | 10 | 128.00 |
| 19. | ರೆಫ್ರಿಜರೇಟೆಡ್ ವಾಹನಗಳ ಖರೀದಿ | ಸಂಖ್ಯೆ | 08 | 120.00 |
| 20. | ಆರ್.ಎ.ಎಸ್/ಬೈಯೋಫಲ್ಕ್ ಘಟಕ-ದೊಡ್ಡ ಘಟಕ | ಸಂಖ್ಯೆ | 10 | 220.00 |
| 21. | ಆರ್.ಎ.ಎಸ್/ಬೈಯೋಫಲ್ಕ್ ಘಟಕ-ಮಾಧ್ಯಮ ಘಟಕ | ಸಂಖ್ಯೆ | 12 | 112.64 |
| 22. | ಆರ್.ಎ.ಎಸ್/ಬೈಯೋಫಲ್ಕ್ ಘಟಕ-ಸಣ್ಣ ಘಟಕ | ಸಂಖ್ಯೆ | 13 | 53.40 |
| 23. | ಜಾಲಶಯಗಳಲ್ಲಿ ಮೀನುಮರಿ ಬಿತ್ತನೆ(ಲಕ್ಷ ಬಿತ್ತನೆ ಮರಿಗಳು) | ಸಂಖ್ಯೆ | 48.86 | 40.64 |
| 24. | ಶಾಖ ನಿರೋದಕ ಪೆಟ್ಟಿಗೆ ಮತ್ತು ಮೂರು ಚಕ್ರವಾಹನ | ಸಂಖ್ಯೆ | 7 | 7.74 |
| 25. | ಶಾಖ ನಿರೋದಕ ಪೆಟ್ಟಿಗೆ ಮತ್ತು ದ್ವಿಚಕ್ರ ಚಕ್ರವಾಹನ | ಸಂಖ್ಯೆ | 35 | 11.09 |
| 26. | ರಫ್ತು ಸಾಮರ್ಥ್ಯಕ್ಕಾಗಿ ಮೀನುಗಾರಿಕೆ ದೋಣಿಯ ನವೀಕರಣ | ಸಂಖ್ಯೆ | 0 | 0.00 |
| | ನಿಜಶರಣ ಅಂಭಿಗರ ಚೌಡ್ಡಯ್ಯ ಅಭಿವೃದ್ಧಿ ಕೇಂದ್ರದಲ್ಲಿ ಠೇವಣಿ | | | 300.00 |
| | **ಒಟ್ಟು** | | | **3862.63** |

| ಕ್ರಸಂ | ವಿವರ | ಘಟಕ | ಮೊತ್ತ (ರೂ.ಲಕ್ಷಗಳಲ್ಲಿ) |
|---|---|---|---|
| | **2019-20** | | |
| 01. | ಸಾಂಪ್ರದಾಯಿಕ ದೋಣಿಗಳ ಯಾಂತ್ರೀಕರಣ | 73 | 52.09 |
| 02. | ಸಮೂದ್ರದಲ್ಲಿ ಮೀನುಗಾರರ ಸುರಕ್ಷತೆ | 118 | 17.61 |
| 03. | ಎಫ್‌ಆರ್‌ಪಿ ದೋಣಿಗಳು 10 ಓಎಎಲ್ ಮತ್ತು ಇನ್ಸುಲೇಟೆಡ್ ಮೀನು ಮತ್ತು ಐಸ್ ಹೋಲ್ಡಿಂಗ್ ಬಾಕ್ಸ್ ವರೆಗೆ | 6 | 4.25 |
| 04. | ಕಪ್ಪೆಚಿಪ್ಪು ಕೃಷಿ | 12 | 1.05 |
| 05. | ಹೊಸ ಮೀನುಕೊಳ ನಿರ್ಮಾಣ ಹಾಗೂ ಹೂಡಿಕೆ ವೆಚ್ಚ | 0 | 163.54 |
| 06. | ಶಾಖ ನಿರೋದಕ ವಾಹನಗಳ ಖರೀದಿ-6 ಟನ್ | 4 | 18.00 |
| 07. | ಶಾಖ ನಿರೋದಕ ವಾಹನಗಳ ಖರೀದಿ-10 ಟನ್ | 5 | 48.00 |
| 08. | ಶಾಖ ನಿರೋದಕ ಪೆಟ್ಟಿಗೆ ಮತ್ತು ದ್ವಿಚಕ್ರ ಚಕ್ರವಾಹನ | 44 | 12.48 |
| 09. | ಮೀನುಮಾರಟ ಮಳಿಗೆಗಳ ಸ್ಥಾಪನೆ | 6 | 24.00 |
| 10. | ಐಸ್ ಬಾಕ್ಸೊಂದಿಗೆ ಆಟೋ ರಿಕ್ಷಾ | 6 | 2.80 |
| | 2018-19 | | |
| 11 | ಮಂಜೂಗಡ್ಡೆ ಘಟಕಗಳ ನವೀಕರಣ | 5 | 42.28 |
| 12. | ಮಂಜೂಗಡ್ಡೆ ಘಟಕಗಳ ನಿರ್ಮಾಣ-50ಟನ್ | 4 | 69.19 |
| 13. | ಆರ್.ಎ.ಎಸ್.-ಮಧ್ಯಮ ವರ್ಗ | 1 | 8.60 |
| 14. | ಜಿ.ಐ.ಎಪ್.ಟಿ. ತಿಳಪಿಯ | | 100.00 |
| 15. | ಮೀನುಮರಿ ಉತ್ಪಾದನ ಕೇಂದ್ರಗಳ ಸೌರ ವಿದ್ಯುದೀಕರಣ | | 71.73 |
| | **ಒಟ್ಟು** | | **291.80** |

**8.3 ನಿರ್ದೇಶನ ಮತ್ತು ಆಡಳಿತ (2405-00-001-0-01):**

ಈ ಲೆಕ್ಕ ಶೀರ್ಷಿಕೆಯಡಿ ರಾಜ್ಯ ವಲಯ ಯೋಜನೆಯಡಿ ಮಂಜೂರಾದ ಕೇಂದ್ರ ಕಛೇರಿ ಹಾಗೂ ಇತರೆ ಕಛೇರಿಗಳ ಸಿಬ್ಬಂದಿ ವೆಚ್ಚ, ಅಭಿಯಂತರರ ಸಂಬಳ, ಗಣಕಯಂತ್ರ, ಫ್ಯಾಕ್ಸ್‌ಯಂತ್ರ ಮತ್ತು ಇತರೆ ವಿದ್ಯುನ್ಮಾನ ಉಪಕರಣಗಳ ಅಳವಡಿಕೆ ಮತ್ತು ಅವುಗಳ ನಿರ್ವಹಣೆ, ವಾಹನ ಖರೀದಿ, ಇತ್ಯಾದಿ ವೆಚ್ಚವನ್ನು ಭರಿಸಲು ಅವಕಾಶ ಕಲ್ಪಿಸಲಾಗಿದೆ. ಈ ಯೋಜನೆಯಡಿ ಇಲಾಖೆಯ ಕಛೇರಿಗಳ ಕಟ್ಟಡಗಳ ನಿರ್ಮಾಣ ಮತ್ತು ನಿರ್ವಹಣೆ, ಆಧುನೀಕರಣ ಮತ್ತು ದುರಸ್ತಿ ಕೆಲಸಗಳನ್ನು ತೆಗೆದುಕೊಳ್ಳಲು, ಮತ್ಸ್ಯಾಲಯಗಳ ಕಾಮಗಾರಿಗಳು ಮತ್ತು ನಿರ್ವಹಣೆಗೆ ಬೇಕಾಗುವ ಸಲಕರಣೆಗಳನ್ನು ಮತ್ತುಇತರೆ ಸಾಮಗ್ರಿಗಳನ್ನು ಖರೀದಿಸಲು, ಅವಕಾಶ ಕಲ್ಪಿಸಲಾಗಿದೆ.

2019–20 ರಿಂದ ಈ ಯೋಜನೆಯಡಿ ನೀಡಲಾಗಿರುವ ಅನುದಾನವನ್ನು ಮೀನುಮರಿ ಕೇಂದ್ರದಲ್ಲಿ ಮೀನುಮರಿ ಉತ್ಪಾದನೆಗೆ, ಫಾರಂಗಳಲ್ಲಿ ಹಾಗೂ ತಾಲ್ಲೂಕು ಮಟ್ಟದ ನರ್ಸರಿಗಳಲ್ಲಿ ಮೀನುಮರಿ ಪಾಲನೆಗೆ ಹಾಗೂ ನಿರ್ವಹಣೆಗೆ ತಗಲುವ ವೆಚ್ಚಗಳಿಗೆ, ಮೀನು ಮರಿ ಸಾಗಾಣಿಕೆ ವಾಹನಗಳ ಖರೀದಿ, ಮೀನು ಮರಿ ಖರೀದಿ ಮತ್ತು ಸಾಗಾಣಿಕೆಗೆ, ವಾಹನಗಳ ನಿರ್ವಹಣೆ ಮತ್ತು ಸಿಬ್ಬಂದಿ ವೆಚ್ಚಗಳಿಗೆ ವಿನಿಯೋಗಿಸಲಾಗುತ್ತಿದೆ.

ಮೀನುಗಾರಿಕೆ ವಿಸ್ತರಣೆ ಕಾರ್ಯಕ್ರಮಗಳಾದ ಪ್ರಚಾರ, ಕಾರ್ಯಾಗಾರ, ಸಾಕ್ಷ್ಯ ಚಿತ್ರತಯಾರಿಕೆ, ಮತ್ಸ್ಯಮೇಳ ಏರ್ಪಡಿಸಲು, ಯೋಜನೆಗಳ ಮೌಲ್ಯಮಾಪನಾ ವೆಚ್ಚ, ತರಬೇತಿ, ಮೀನು ಕೃಷಿಕರ ದಿನಾಚರಣೆ, ಇತ್ಯಾದಿ.

2020–21 ನೇ ಸಾಲಿನಲ್ಲಿ ರೂ.2778.00 ಲಕ್ಷ ಅನುದಾನ ಒದಗಿಸಲಾಗಿರುತ್ತದೆ ಹಾಗೂ ಸಾಂಪ್ರದಾಯಿಕ ದೋಣಿಗಳಿಗೆ ಸೀಮೆಎಣ್ಣೆ ಪೂರೈಕೆ ಯೋಜನೆಯಡಿಯಲ್ಲಿ ರೂ.106.00ಲಕ್ಷಗಳನ್ನು ಪುನರ್ ವಿನಿಯೋಗಿಸಲಾಗಿದೆ ಹಾಗೂ ಹೆಚ್ಚುವಾರಿ ಅನುದಾನ ರೂ.17.87 ಲಕ್ಷಗಳು ಇದರಲ್ಲಿ ರೂ.2684.22 ಲಕ್ಷ ವೆಚ್ಚ ಮಾಡಲಾಗಿದೆ.

### 8.4. ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ:

ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ 2020–21 ನೇ ಸಾಲಿನಲ್ಲಿ ಈ ಕೆಳಗಿನ ಕಾರ್ಯಕ್ರಮಗಳನ್ನ ಜಾರಿಗೆತರಲು ರೂ.1700.00 ಲಕ್ಷ ವೆಚ್ಚ ಮಾಡಲಾಗಿದೆ .

| ಕ್ರಸಂ | ಯೋಜನೆಗಳ ವಿವರ | ಯೋಜನೆಯ ವೆಚ್ಚ (ರೂ.ಲಕ್ಷಗಳಲ್ಲಿ) |
|---|---|---|
| 1. | ರಾಜ್ಯದ ಮೆನಸಿನಹಳ್ಳಿ, ನುಗು, ಮುಲ್ಕಿ, ಹಿಡ್ಕಲ್, ಕಬಿನಿ, ತಿಪ್ಪಗಾನಹಳ್ಳಿಗಳಲ್ಲಿ ಮೀನು ಮರಿಉತ್ಪಾದನಾ ಕೇಂದ್ರಗಳ ನವೀಕರಣ | 900.00 |
| 2. | ರಾಜ್ಯದಇಲಾಖಾ ಮೀನುಮರಿ ಪಾಲನ ಕೇಂದ್ರಗಳ ಆಧುನೀಕರಣ(30 ಪಾಲನ ಕೇಂದ್ರಗಳು) | 300.00 |
| 3. | ಬೆತಮಂಗಲ ಮೀನುಗಾರಿಕೆತರಬೇತಿಕೇಂದ್ರದಉನ್ನತಿಕರಣ | 300.00 |
| 4. | ಶೀತಲಾ ಸರಪಳಿ ಸ್ಥಾಪಿಸಲು 8ಇನ್ಸೂಲೇಟ್ಡ್‌ವ್ಯಾನ್‌ಖರೀದಿ | 200.00 |
| | **ಒಟ್ಟು** | **1700.00** |

## 9. . ಜಿಲ್ಲಾ ಪಂಚಾಯತ್ ಯೋಜನೆಗಳ ವಿವರ:

### 9.1 ಮೀನುಗಾರಿಕೆ ಕಟ್ಟಡಗಳು ಮತ್ತು ಸೌಲಭ್ಯಗಳ ನಿರ್ಮಾಣ ಮತ್ತು ನಿರ್ವಹಣೆ (2405–00–101–0–27)

ಈ ಲೆಕ್ಕ ಶೀರ್ಷಿಕೆಯಡಿ ಕಛೇರಿ ಕಟ್ಟಡಗಳ ನಿರ್ಮಾಣ ಮತ್ತು ನಿರ್ವಹಣೆ, ಮೀನು ಮರಿಉತ್ಪಾದನಾ ಕೇಂದ್ರಗಳ ಮತ್ತು ತಾಲ್ಲೂಕು ಮಟ್ಟದ ನರ್ಸರಿಗಳ ದುರಸ್ತಿ ಮತ್ತು ಸುಧಾರಣೆ, ಕರಾವಳಿ ಜಿಲ್ಲೆಗಳಲ್ಲಿ ಮೀನುಗಾರಿಕೆ ಜೆಟ್ಟಿಗಳ, ಇಳಿದಾಣ ಕೇಂದ್ರಗಳ, ಹರಾಜು ಪ್ರಾಂಗಣಗಳ ನಿರ್ಮಾಣ ಮತ್ತು ನಿರ್ವಹಣೆ, ಕಾರವಾರ, ಹಾಸನ, ಬೆಳಗಾವಿ, ಕಲಬುರ್ಗಿ, ದಕ್ಷಿಣ ಕನ್ನಡ, ಬೀದರ್, ಕೋಲಾರ, ಕೊಡಗು ಮತ್ತು ವಿಜಯಪುರ ಜಿಲ್ಲೆಗಳ ಮತ್ಸ್ಯಾಲಯಗಳ 2020–21 ನೇ ಸಾಲಿನಲ್ಲಿ ಸದರಿ ಯೋಜನೆಯಡಿ ರೂ.300.03 ಲಕ್ಷ ಅನುದಾನ ಒದಗಿಸಲಾಗಿದ್ದು, ರೂ.241.70 ಲಕ್ಷ ವೆಚ್ಚ ಮಾಡಲಾಗಿದೆ.

### 9.2 ಒಳನಾಡು ಮೀನುಗಾರಿಕೆಅಭಿವೃದ್ಧಿಗಾಗಿ ಸಹಾಯ (2405–00–101–0–28):

ಈ ಯೋಜನೆಯಡಿ ಜೌಗು ಹಾಗೂ ಚೌಳು ಪ್ರದೇಶಗಳಲ್ಲಿ ಒಂದು ಎಕರೆ ಮೀನು ಕೃಷಿ ಕೊಳ ನಿರ್ಮಿಸಲು ಪ್ರತಿ ಎಕರೆ ಮೀನು ಕೃಷಿ ಕೊಳ ನಿರ್ಮಾಣ ಹಾಗೂ ಮೊದಲ ವರ್ಷದ ಆವರ್ತಕ ವೆಚ್ಚದ ಶೇಕಡ 25 ರಷ್ಟು ಅಂದರೆ ಗರಿಷ್ಠ ರೂ.30,000/– ಸಹಾಯಧನವಾಗಿ ನೀಡಲಾಗುತ್ತದೆ. ಒಂದು ಎಕರೆ ಸ್ವಂತ ಜಮೀನಿನಲ್ಲಿ ಮೀನು ಕೃಷಿ ಕೊಳವನ್ನು ನಿರ್ಮಾಣ ಮಾಡಿ ಮೀನುಗಾರಿಕೆಯನ್ನು ತೆಗೆದುಕೊಳ್ಳಲು ಖಾಸಗಿ ವ್ಯಕ್ತಿಗಳಿಗೆ ರೂ.10,000.00 ಗಳ ಸಹಾಯಧನವಾಗಿ ನೀಡಲಾಗುತ್ತದೆ. ಅಲ್ಲದೆ, ಹುಲ್ಲುಗೆಂಡೆ ಮೀನುಮರಿಗಳನ್ನು ಕೆರೆಗಳಲ್ಲಿ ಬಿತ್ತನೆ ಮಾಡಿದ ಕೃಷಿಕರಿಗೆ ಶೇಕಡ 50 ರಷ್ಟು ಗರಿಷ್ಠ ರೂ.5000 ಗಳಿಗೆ

ಮೀರದಂತೆ ಸಹಾಯಧನವನ್ನು ನೀಡಲಾಗುವುದು ಹಾಗೂ ಬಾವಿ ಮತ್ತು ನೀರಾವರಿ ಹೊಂಡಗಳಲ್ಲಿ ಮೀನು ಕೃಷಿಗಾಗಿ 250 ಸಾಮಾನ್ಯಗೆಂಡೆ ಮರಿಗಳನ್ನು ಉಚಿತವಾಗಿ ಸರಬರಾಜು ಮಾಡಿ ಮೀನು ಕೃಷಿಯನ್ನು ಪ್ರೋತ್ಸಾಹಿಸಲಾಗುವುದು.

ಈ ಯೋಜನೆಯಡಿ ಅನುದಾನವನ್ನು ಮೀನುಮರಿ ಕೇಂದ್ರದಲ್ಲಿ ಮೀನುಮರಿ ಉತ್ಪಾದನೆಗೆ, ತಾಲ್ಲೂಕು ಮಟ್ಟದ ನರ್ಸರಿಗಳಲ್ಲಿ, ಫಾರಂಗಳಲ್ಲಿ, ಕೇಜ್ ಮತ್ತು ಪೆನ್‌ಗಳಲ್ಲಿ ಮೀನುಮರಿ ಪಾಲನೆಗೆ, ಹಾಗೂ ನಿರ್ವಹಣೆಗೆ ತಗಲುವ ವೆಚ್ಚಗಳಿಗೆ, ಮೀನುಮರಿ ಖರೀದಿ ಮತ್ತು ಸಾಗಾಣಿಕೆಗೆ, ವಾಹನಗಳ ಖರೀದಿ, ನಿರ್ವಹಣೆ ಮತ್ತು ಇತರ ಸಲಕರಣೆಗಳ ಖರೀದಿಗೆ ಉಪಯೋಗಿಸಲು ಅವಕಾಶ ಕಲ್ಪಿಸಲಾಗಿದೆ..

ಸದರಿ ಯೋಜನೆಯ ಅನುಷ್ಠಾನಕ್ಕೆ 2020-21ನೇ ಸಾಲಿನಲ್ಲಿ ರೂ.676.05 ಲಕ್ಷಗಳ ಅನುದಾನವನ್ನು ಒದಗಿಸಲಾಗಿರುತ್ತದೆ. ಈ ಮೇಲಿನ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಒಟ್ಟು ರೂ.621.83 ಲಕ್ಷಗಳನ್ನು ವೆಚ್ಚ ಮಾಡಲಾಗಿದೆ.

**9.3ಮೀನು ಮಾರುಕಟ್ಟೆಗಳ ನಿರ್ಮಾಣ ಮತ್ತು ಮೀನು ಮಾರಾಟಕ್ಕೆ ಸಹಾಯ-(2405-00-101-0-30)**

ಮೀನುಗಾರರು ಮೀನನ್ನುತಾಜಾ ಹಾಗೂ ಆರೋಗ್ಯಕರ ಸ್ಥಿತಿಯಲ್ಲಿ ಮಾರಾಟ ಮಾಡಲು ಅನುಕೂಲವಾಗುವಂತೆ ಶಾಖ ನಿರೋಧಕ ಪೆಟ್ಟಿಗೆ ಮತ್ತು ಸೈಕಲ್ಲುಗಳನ್ನು ಖರೀದಿಸಲು ಪ್ರತಿಶತ 50ರ ನೆರವಿನೊಂದಿಗೆ ಗರಿಷ್ಠ ರೂ.2000 ಸಹಾಯಧನವನ್ನು ಹಾಗೂ ದ್ವಿಚಕ್ರ ವಾಹನ ಮತ್ತು ಶಾಖ ನಿರೋಧಕ ಪೆಟ್ಟಿಗೆ ಖರೀದಿಸಲು ಶೇ.25 ರಷ್ಟುಗರಿಷ್ಠ ರೂ.10000/- ಗಳ ಸಹಾಯಧನವನ್ನು ನೀಡಲಾಗುವುದು.

ಇಳಿದಾಣ ಕೇಂದ್ರಗಳಿಂದ ತಾಜಾ ಮೀನನ್ನು ಆರೋಗ್ಯಕರ ರೀತಿಯಲ್ಲಿ ಮಾರಾಟ ಸ್ಥಳಗಳಿಗೆ ತ್ವರಿತ ಸಾಗಾಣಿಕೆಗಾಗಿ ಮೀನುಗಾರರಿಗೆ ವಾಹನವನ್ನು ಖರೀದಿಸಲು ಆರ್ಥಿಕ ನೆರವನ್ನು ನೀಡುವ ಉದ್ದೇಶದಿಂದ "ಮತ್ಸ್ಯವಾಹಿನಿ" ಯೋಜನೆಯನ್ನು ಹಮ್ಮಿಕೊಳ್ಳಲಾಗಿದೆ. ತ್ರಿಚಕ್ರ ಟೆಂಪೋರಿಕ್ಷಾವನ್ನು ಖರೀದಿಸಲು ಶೇ.25 ರಷ್ಟು ಗರಿಷ್ಠ ರೂ.30,000 ಗಳ ಸಹಾಯಧನವನ್ನು ಹಾಗೂ ನಾಲ್ಕು ಚಕ್ರದ ವಾಹನ ಖರೀದಿಸಲು ಶೇ.25 ರಷ್ಟುಗರಿಷ್ಠ ರೂ.35,000 ಗಳ ಸಹಾಯಧನವನ್ನು ಮೂರು ಅಥವಾ ನಾಲ್ಕು ಫಲಾನುಭವಿಗಳ ಒಂದು ಗುಂಪಿಗೆ ನೀಡಲಾಗುವುದು.

ಇದಲ್ಲದೆ ಸದರಿ ಯೋಜನೆಯಡಿ ಯಾಂತ್ರೀಕೃತವಲ್ಲದ (ಪಾತಿ) ದೋಣಿ ಹೊಂದಿರುವ ಮೀನುಗಾರರಿಗೆ ಮೀನುಗಾರಿಕೆ ಸಲಕರಣೆಗಳನ್ನು ಗರಿಷ್ಠ ರೂ.10000/- ಗಳ ಘಟಕ ವೆಚ್ಚದಲ್ಲಿ ಖರೀದಿಸಲು ಮತ್ತು ಪ್ರತಿಶತ 50 ರಷ್ಟು ಅಂದರೆ ಗರಿಷ್ಠ ರೂ.5000/- ಗಳನ್ನು ಸಹಾಯಧನವಾಗಿ ನೀಡಲು ಅವಕಾಶ ಕಲ್ಪಿಸಲಾಗಿದೆ.

2020-21ನೇ ಸಾಲಿನಲ್ಲಿ ಈ ಯೋಜನೆಗಾಗಿ ರೂ.180.00 ಲಕ್ಷ ಆಯವ್ಯಯ ಒದಗಿಸಿದ್ದು, ರೂ.173.77 ಲಕ್ಷಗಳನ್ನು ವೆಚ್ಚ ಮಾಡಲಾಗಿದೆ.

**9.4 ಪ್ರದರ್ಶನ ಮತ್ತುತರಬೇತಿ (2405-00-101-0-32):**

ಮೀನು ಕೃಷಿಯ ಹಿತದೃಷ್ಟಿಯಿಂದ ಸಾರ್ವಜನಿಕರ ಮಾಹಿತಿಗಾಗಿ ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದಲ್ಲಿ ನಡೆಯುವ ವಸ್ತು ಪ್ರದರ್ಶನದಲ್ಲಿ ಮೀನುಗಾರಿಕಾ ಇಲಾಖಾ ಕಾರ್ಯಕ್ರಮಗಳ ಬಗ್ಗೆ ಪ್ರದರ್ಶಿಸಲಾಗುವುದು. ಹಾಗೂ ಆಸಕ್ತಿ ಹೊಂದಿದ ಕೃಷಿಕರಿಗೆ ಮೀನು ಕೃಷಿಯ ಬಗ್ಗೆ ತರಬೇತಿ ನೀಡುವುದು, ಮತ್ಸ್ಯಪಾಲನೆ ಮತ್ತು ಇಲಾಖಾ ಕಾರ್ಯಕ್ರಮಗಳ ಬಗ್ಗೆ ಮಾಹಿತಿ ನೀಡಲಾಗುವುದು. 2020-21ನೇ ಸಾಲಿನಲ್ಲಿ ಪ್ರದರ್ಶನ ಮತ್ತು ತರಬೇತಿಗೆ ರೂ.100.00 ಲಕ್ಷ ಅನುದಾನ ಒದಗಿಸಲಾಗಿದ್ದು ಇದರಲ್ಲಿ ರೂ.89.80 ಲಕ್ಷ ವೆಚ್ಚವಾಗಿದೆ.

**9.5 ಜಿಲ್ಲಾ ಮತ್ತು ಇತರೆ ಸಿಬ್ಬಂದಿ (2405-00-101-0-26) ಜಿಲ್ಲಾ ವಲಯ:**

ಸದರಿ ಯೋಜನೆಯಡಿ ಜಿಲ್ಲಾ ವಲಯದ ಸಿಬ್ಬಂದಿ ವೇತನ ಮತ್ತು ಇತರೆ ವೆಚ್ಚಗಳನ್ನು ಭರಿಸಲು ಅನುದಾನ ಕಲ್ಪಿಸಲಾಗಿದೆ. 2020-21 ನೇ ಸಾಲಿನಲ್ಲಿ ರೂ.2950.57 ಲಕ್ಷಗಳ ಅನುದಾನವನ್ನು ಒದಗಿಸಲಾಗಿದ್ದು. ಇದರಲ್ಲಿ ರೂ.2454.41 ಲಕ್ಷ ವೆಚ್ಚವಾಗಿದೆ.

2020-21ನೇ ಸಾಲಿನಲ್ಲಿ ಜಿಲ್ಲಾ ಪಂಚಾಯತ್ ಯೋಜನೆಗಳ ಅನುಷ್ಠಾನದಲ್ಲಿ ಸಾಧಿಸಲಾದ ಆರ್ಥಿಕ ಪ್ರಗತಿಯನ್ನು ಕೆಳಗೆ ನಮೂದಿಸಲಾಗಿದೆ.

**(ರೂ.ಲಕ್ಷಗಳಲ್ಲಿ)**

| ಕ್ರ.ಸಂ | ಯೋಜನೆ | ಅನುದಾನ | ವೆಚ್ಚ |
|---|---|---|---|

| | | | |
|---|---|---|---|
| 1. | ಮೀನುಗಾರಿಕೆ ಕಟ್ಟಡಗಳು ಮತ್ತು ಸೌಲಭ್ಯಗಳ ನಿರ್ಮಾಣ ಮತ್ತು ನಿರ್ವಹಣೆ | 300.03 | 241.70 |
| 2. | ಒಳನಾಡು ಮೀನುಗಾರಿಕೆಅಭಿವೃದ್ಧಿಗೆ ಸಹಾಯ | 676.05 | 621.83 |
| 3. | ಮೀನು ಮಾರುಕಟ್ಟೆಗಳ ನಿರ್ಮಾಣ ಮತ್ತು ಮೀನು ಮಾರಾಟಕ್ಕೆ ಸಹಾಯ | 180.00 | 173.77 |
| 4. | ಪ್ರದರ್ಶನಗಳು ಮತ್ತುತರಬೇತಿ | 100.00 | 89.80 |
| 5. | ಜಿಲ್ಲಾ ಮತ್ತುಇತರೆ ಸಿಬ್ಬಂದಿ | 2950.57 | 2454.41 |
| | **ಒಟ್ಟು** | **4206.65** | **3581.51** |

**10. ವೆಚ್ಚ ಮತ್ತು ಆದಾಯ:**

2019–20 ಮತ್ತು 2020–21ನೇ ಸಾಲುಗಳಲ್ಲಿ ಇಲಾಖೆಯ ವಿವಿಧ ಯೋಜನೆಗಳಡಿ ಆಗಿರುವ ವೆಚ್ಚ ಮತ್ತು ಆದಾಯದ ವಿವರಗಳು ಕೆಳಕಂಡಂತಿವೆ.

**(ರೂ.ಲಕ್ಷಗಳಲ್ಲಿ)**

| ಕ್ರ.ಸಂ. | **ಯೋಜನೆಗಳು** | **2019–20** | **2020–21** |
|---|---|---|---|
| 1. | ರಾಜ್ಯ ವಲಯದ ಯೋಜನೆಗಳ ವೆಚ್ಚ | 27862.10 | 30474.49 |
| 2. | ಜಿಲ್ಲಾ ಪಂಚಾಯತ್ ಯೋಜನೆಗಳ ವೆಚ್ಚ | 3706.60 | 3581.51 |
| 3. | ಆದಾಯ | 1985.27 | 1920.82 |

**ಮೀನುಗಾರಿಕೆ ನಿರ್ದೇಶಕರು.**